# ತರಗತಿ: 01 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಕನ್ನಡ – ವಿದ್ಯಾ ಪ್ರವೇಶ (ECL)

| ಕ್ರ. ಸಂ. | ಕಲಿಕಾ ಫಲಗಳು | ಅಂಕಗಳು | ಮೌಲ್ಯಾಂಕನದ ಅಂಶಗಳು/ ಸೂಚನೆಗಳು |
|---|---|---|---|
| 1. | ಧ್ವನಿ ಸಂಕೇತಗಳ ಅರಿವು, ಅಕ್ಷರ ಶಬ್ದ ಸಹ ಸಂಬಂಧ ಅರಿಯುವರು. | 3 | 1. ಚಿತ್ರಗಳ ಹೆಸರಿನ ಧ್ವನಿ ಮತ್ತು ಚಿತ್ರದ ಬಣ್ಣ ಗಮನಿಸುತ್ತಾರೆ. ಆ ಚಿತ್ರಗಳ ಮೊದಲ ಅಕ್ಷರಗಳನ್ನು ಗುರುತಿಸಿ ಹೇಳುತ್ತಾರೆ.<br>2. ನೀಡಿದ ಚಿತ್ರಗಳ ಹೆಸರುಗಳನ್ನು ಗುರ್ತಿಸಿ, ಚಿತ್ರದ ಹೆಸರಿನಲ್ಲಿರುವ ಅಕ್ಷರಗಳನ್ನು ಎಣಿಸಿ ಹೇಳುತ್ತಾರೆ.<br>3. ಶಿಕ್ಷಕರು ಹೇಳಿದ ಪದದ ಆರಂಭದ ಮತ್ತು ಅಂತ್ಯದ ಅಕ್ಷರ ಹೇಳುತ್ತಾರೆ. |
| 2. | ಆಲಿಸುವ ಕೌಶಲ, ಕ್ರಿಯಾತ್ಮಕ ಸ್ವ–ಅಭಿವ್ಯಕ್ತಿ, ಔಪಚಾರಿಕ ಮಾತುಕತೆ, ಬಣ್ಣಗಳ ಕಲ್ಪನೆಯನ್ನು ತಿಳಿಯುವರು. | 3 | 4. ಶಿಕ್ಷಕರು ಹೇಳಿದ ಕಥೆಯನ್ನು ಆಲಿಸಿ, ತನ್ನ ನೆರೆಹೊರೆಯವರೊಂದಿಗೆ ಹೇಳುತ್ತಾರೆ.<br>5. ಶಾಲಾ ಪರಿಸರ ಮತ್ತು ತನ್ನ ಮನೆಯಲ್ಲಿನ ಪರಿಚಿತ ವಸ್ತುಗಳ ಬಗ್ಗೆ ಮಾತನಾಡುತ್ತಾರೆ.<br>6. ಲಭ್ಯ ಚಿತ್ರಗಳಲ್ಲಿ ಹೆಸರಿನ ಧ್ವನಿಯನ್ನು ಆಲಿಸಿ, (ಉದಾ : ಕಾಗೆ, ಗಿಳಿ, ಬಾಳೆ ಇತ್ಯಾದಿ) ಅವುಗಳ ಬಣ್ಣಗಳ ಬಗ್ಗೆ ತಮ್ಮದೆ ಮಾತಿನಲ್ಲಿ ಹೇಳುತ್ತಾರೆ. |
| 3. | ಚಿತ್ರಗಳನ್ನು ಓದುವರು. | 3 | 7. ಶಿಕ್ಷಕರು ನೀಡಿದ ಚಿತ್ರಗಳನ್ನು ಗುರ್ತಿಸಿ ಹೆಸರಿಸುತ್ತಾರೆ.<br>8. ಚಿತ್ರಗಳಲ್ಲಿನ ಮುಖದ ಭಾವನೆಯನ್ನು ಗುರ್ತಿಸಿ ಹೇಳುತ್ತಾರೆ.<br>(ಉದಾ: ಸಂತೋಷ, ದುಃಖ, ನಗು, ಮುಂತಾದ ಮುಖದ ಭಾವವಿರುವ ಚಿತ್ರಗಳು)<br>9. ತನ್ನ ಇಷ್ಟದ ಚಿತ್ರ ಬಿಡಿಸಿ, ಅದರ ಬಗ್ಗೆ ಹೇಳುತ್ತಾರೆ. |
| 4. | ಸೃಜನಾತ್ಮಕ ಸ್ವ–ಅಭಿವೃದ್ಧಿ, ಧ್ವನಿ ವಿಜ್ಞಾನದ ಅರಿವು, ಪ್ರಾಸ ಪದಗಳ ಪರಿಕಲ್ಪನೆ, ಪದ ಸಂಪತ್ತಿನ ಅಭಿವೃದ್ಧಿ ಹೆಚ್ಚಿಸಿಕೊಳ್ಳುವರು. | 3 | 10. ಚಿತ್ರಗಳ ಹೆಸರುಗಳನ್ನು ಹೇಳಿ, ಪ್ರತಿ ಚಿತ್ರದ ಮಧ್ಯದ ಅಕ್ಷರ ಹೇಳುತ್ತಾರೆ.<br>11. ಚಿತ್ರಗಳನ್ನು ಗಮನಿಸಿ ಪ್ರಾಸಪದಗಳನ್ನು ಹೇಳುತ್ತಾರೆ.<br>12. ಹೇಳಿದ ಚಿತ್ರದ ಧ್ವನಿಯಲ್ಲಿರುವ ಅಕ್ಷರಗಳ ಸಂಖ್ಯೆಯನ್ನು ಹೇಳುತ್ತಾರೆ. |
| 5. | ಅವಧಾನ ಮತ್ತು ಆಲಿಸುವಿಕೆ, ಅನುಕ್ರಮ ಚಿಂತನೆ ಸ್ಥೂಲ ಸ್ನಾಯು ಕೌಶಲಗಳ ಅಭಿವೃದ್ಧಿಪಡಿಸಿಕೊಳ್ಳುವರು. | 3 | 13. ಒಂದೇ ಧ್ವನಿಯ ಮತ್ತು ವಿಭಿನ್ನ ಧ್ವನಿಯ ಪದಗಳನ್ನು ಶಿಕ್ಷಕರು ಬರೆದು ಓದಿದ (ಉದಾ: ಪಟ, ಪದಕ, ಚರಕ, ಪುಸ್ತಕ) ಪದಗಳಲ್ಲಿ ವಿಭಿನ್ನ ಧ್ವನಿಯ ಪದವನ್ನು ಆಲಿಸಿ ಹೇಳುತ್ತಾರೆ.<br>14. ಅಕ್ಷರಗಳ ಮಿಂಚುಪಟ್ಟಿಯಲ್ಲಿ ಹೇಳಿದ ಅಕ್ಷರವನ್ನು ತೆಗೆದು ಹೇಳುತ್ತಾರೆ.<br>15. ಆಲಿಸಿದ ಘಟನಾವಳಿಗಳನ್ನು ಗ್ರಹಿಸಿ ಹೇಳುತ್ತಾರೆ. |

**ಸೂಚನೆಗಳು :**

*** ಕಲಿಕಾ ಫಲಕ್ಕೆ ಅನುಗುಣವಾಗಿ ಮೌಲ್ಯಮಾಪನದ ಅಂಶ / ಸೂಚನೆಗಳನ್ನು ನೀಡಿದ್ದು, ಸುಗಮಕಾರರು ಲಿಖಿತ/ ಮೌಖಿಕ/ ವಿಭಿನ್ನ ಮೌಲ್ಯಮಾಪನ ತಂತ್ರ ಸಾಧನಗಳ ಮೂಲಕ ಮೌಲ್ಯಮಾಪನಕ್ಕೆ ಒಳಪಡಿಸಬಹುದಾಗಿದೆ. * ಪ್ರತಿ ಮೌಲ್ಯಮಾಪನದ ಅಂಶ/ ಸೂಚನೆಗಳಿಗೆ 1 ಅಂಕ ನಿಗದಿಪಡಿಸಿದ್ದು, ಮಗುವಿನ ಪ್ರತಿಕ್ರಿಯೆ ಸರಿ ಇದ್ದರೆ 1 ಅಂಕ, ತಪ್ಪಿದ್ದರೆ 0 ಅಂಕ ನೀಡುವುದು.**

## ತರಗತಿ : 01 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಕನ್ನಡ – ಶಿಕ್ಷಕರ ವೈಯಕ್ತಿಕ ನಮೂದು ವಹಿ

| ಕ್ರ. ಸಂ. | ಕಲಿವಿನ ಫಲ → | 1 | | | 2 | | | 3 | | | 4 | | | 5 | | | ಒಟ್ಟು ಅಂಕಗಳು | ಶೇಕಡಾ | ಶ್ರೇಣಿ |
|---|---|---|---|---|---|---|---|---|---|---|---|---|---|---|---|---|---|---|---|
| | ಮೌಲ್ಯಾಂಕನದ ಅಂಕಗಳ ಕ್ರಮ ಸಂಖ್ಯೆ→ ವಿದ್ಯಾರ್ಥಿಗಳ ಹೆಸರು ↓ | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | | | |
| 01 | | | | | | | | | | | | | | | | | | | |
| 02 | | | | | | | | | | | | | | | | | | | |
| 03 | | | | | | | | | | | | | | | | | | | |
| 04 | | | | | | | | | | | | | | | | | | | |
| 05 | | | | | | | | | | | | | | | | | | | |
| 06 | | | | | | | | | | | | | | | | | | | |
| 07 | | | | | | | | | | | | | | | | | | | |
| 08 | | | | | | | | | | | | | | | | | | | |
| 09 | | | | | | | | | | | | | | | | | | | |
| 10 | | | | | | | | | | | | | | | | | | | |

ವಿಷಯ ಶಿಕ್ಷಕರ ಸಹಿ

ಮುಖ್ಯಶಿಕ್ಷಕರ ಸಹಿ

# ತರಗತಿ: 01 – ರೂಪಣಾತ್ಮಕ ಮೌಲ್ಯಾಂಕನ (FA) –1 ವಿಷಯ: ಗಣಿತ – ವಿದ್ಯಾಪ್ರವೇಶ (IL)

| ಕ್ರ. ಸಂ. | ಕಲಿಕಾ ಫಲಗಳು | ಅಂಕಗಳು | ಮೌಲ್ಯಾಂಕನದ ಅಂಶಗಳು/ಸೂಚನೆಗಳು |
|---|---|---|---|
| 1 |  ಇವುಗಳನ್ನು ಗುರುತಿಸಿ ಹೇಳುವರು. | 3 | 1) ಮಕ್ಕಳು ತಾವು ಸೇವಿಸುವ ಬಿಸ್ಕತ್, ಚಾಕ್ಲೇಟ್, ಲಡ್ಡು, ಇತ್ಯಾದಿ ವಸ್ತುಗಳ ಆಕಾರಗಳನ್ನು ಗಮನಿಸಿ ವೃತ್ತ, ತ್ರಿಭುಜ, ಆಯತ, ಚೌಕ ಆಕೃತಿಗಳನ್ನು ಗುರುತಿಸುತ್ತಾರೆ. (ಇಟ್ಟಿಗೆ, ಹರಳು, ಎಲೆಗಳು ಇತ್ಯಾದಿ ಬಳಸಿ)<br>2) ಬೇರೆ ಬೇರೆ ಬಣ್ಣಗಳ ಮತ್ತು ಚಿಕ್ಕ–ದೊಡ್ಡ ಆಕಾರಗಳ ಚೌಕ, ಆಯತ, ವೃತ್ತ ತ್ರಿಭುಜ ಆಕೃತಿಗಳ ಗುಂಪಿನಲ್ಲಿ ಸೂಚಿಸಿದ ಬಣ್ಣದ ಆಕೃತಿಗಳನ್ನು ತೆಗೆದು ಕೊಡುತ್ತಾರೆ.<br>3) ವಿವಿಧ ಆಕಾರಗಳು ಬರುವಂತೆ (ಆಯತ. ಚೌಕ. ತ್ರಿಭುಜ ಆಕೃತಿಗಳು ಬರುವಂತೆ) ಮಡಿಚಿದ ಹಾಳೆಗಳಲ್ಲಿನ ಸೂಚಿಸಿದ ಆಕೃತಿಗೆ ಬಣ್ಣ ಹಚ್ಚಿ ಹೆಸರಿಸುತ್ತಾರೆ. ತಮಗಿಷ್ಟವಾದ ಆಕೃತಿಯನ್ನು ನೋಟ್‌ಪುಸ್ತಕದಲ್ಲಿ ಬರೆಯುತ್ತಾರೆ |
| 2 | ವಸ್ತುಗಳ ಆಕಾರ, ಗಾತ್ರ, ಬಣ್ಣ ಇತ್ಯಾದಿ ಭೌತಿಕ ಲಕ್ಷಣಗಳನ್ನು ಆಧರಿಸಿ ವಿಂಗಡಿಸುವರು. ಗುಂಪು ಮಾಡುವರು. ಮತ್ತು ಹೋಲಿಸಿ ವರ್ಗೀಕರಿಸುವರು. ಉದಾ: ದೊಡ್ಡದು–ಚಿಕ್ಕದು, ಎತ್ತರ–ಗಿಡ್ಡ, ಭಾರ–ಹಗುರ, ಗಾತ್ರ –ಪ್ರಮಾಣ ಇತ್ಯಾದಿ ವಿವರಿಸುವರು. | 3 | 4) ಎರಡು ವಸ್ತುಗಳಲ್ಲಿ ಬಣ್ಣಗಳ/ಭೌತಿಕ ಲಕ್ಷಣಗಳ ಆಧಾರದ ಮೇಲೆ ದೊಡ್ಡದು – ಚಿಕ್ಕದು ಗುರುತಿಸುತ್ತಾರೆ. (ಉದಾ: ತರಗತಿ ಕೊಠಡಿಯಲ್ಲಿರುವ ಮೇಜು – ಕುರ್ಚಿ, ಸೀಮೆಸುಣ್ಣ, ಡಸ್ಟರ್, ಕ್ರೇಯಾನ್ಸ್ ಬಾಕ್ಸ್‌ನಲ್ಲಿರುವ ಬಣ್ಣದ ಎರಡು ಪೆನ್ಸಿಲ್‌ಗಳು, ಬೇರೆ ಬೇರೆ ಆಕಾರದ ಪೆನ್ಸಿಲ್‌ಗಳನ್ನು ಬಳಸಿ)<br>5) ಪರಿಸರದಲ್ಲಿ ಕಾಣುವ/ಲಭ್ಯವಿರುವ ವಸ್ತುಗಳನ್ನು ಬಳಸಿ ಎರಡು ವಸ್ತುಗಳಲ್ಲಿ ಭಾರ – ಹಗುರ ಗುರುತಿಸಿ ಹೇಳುತ್ತಾರೆ. (ಉದಾ: ಬೇರೆ ಬೇರೆ ಆಕಾರದ ಕಲ್ಲುಗಳು, ಎಲೆಗಳು, ಕಟ್ಟಿಗೆಯ ತುಣುಕುಗಳು, ಬೇರೆ ಬೇರೆ ಆಕಾರದ ಇಟ್ಟಿಗೆಗಳ ತುಣುಕುಗಳನ್ನು ಬಳಸಿ)<br>6) ಪರಿಸರದಲ್ಲಿ ಕಾಣುವ/ಲಭ್ಯವಿರುವ ವಸ್ತುಗಳನ್ನು ಬಳಸಿ ಎರಡು ವಸ್ತುಗಳಲ್ಲಿ ಎತ್ತರ–ಗಿಡ್ಡ ಗುರುತಿಸಿ ಹೇಳುತ್ತಾರೆ.( ಆಟಿಕೆ ಮೂಲೆಗಳಲ್ಲಿನ ಯಾವುದಾದರೂ ಎರಡು ಗೊಂಬೆಗಳನ್ನು ತರಲು ತಿಳಿಸಿ ಅವುಗಳಲ್ಲಿ ಯಾವುದು ಚಿಕ್ಕದು–ದೊಡ್ಡದು, ಯಾವುದು ಎತ್ತರ–ಗಿಡ್ಡ, ಯಾವುದು ಭಾರ–ಹಗುರ ಇತ್ಯಾದಿ) |
| 3 | ಹೆಚ್ಚು–ಕಡಿಮೆ–ಸಮ ಗುರುತಿಸುವರು. | 3 | 7) ಲಭ್ಯವಿರುವ ವಸ್ತುಗಳನ್ನು ಬಳಸಿ, ರಚಿಸಿದ ಗುಂಪುಗಳಲ್ಲಿ ಹೆಚ್ಚು ವಸ್ತುಗಳಿರುವ ಗುಂಪನ್ನು ಗುರುತಿಸುತ್ತಾರೆ.<br>8) ಲಭ್ಯವಿರುವ ವಸ್ತುಗಳನ್ನು ಬಳಸಿ, ರಚಿಸಿದ ಗುಂಪುಗಳಲ್ಲಿ ಕಡಿಮೆ ವಸ್ತುಗಳಿರುವ ಗುಂಪನ್ನು ಗುರುತಿಸುತ್ತಾರೆ.<br>9) ಲಭ್ಯವಿರುವ ವಸ್ತುಗಳನ್ನು ಬಳಸಿ, ರಚಿಸಿದ ಗುಂಪುಗಳಲ್ಲಿ ಸಮ ಸಂಖ್ಯೆಯ ವಸ್ತುಗಳಿರುವ ಗುಂಪನ್ನು ಗುರುತಿಸುತ್ತಾರೆ. ( ಕಲ್ಲು, ಹರಳು, ಬೀಜ, ಗಣಿತ ಕಿಟ್‌ನಲ್ಲಿರುವ ವಸ್ತುಗಳನ್ನು ಬಳಸಿ ಈ ಮೇಲಿನ ಚಟುವಟಿಕೆಗಳನ್ನು ಮಾಡಿಸುವುದು.) |

| | | | |
|---|---|---|---|
| 4 | ವಿನ್ಯಾಸ ಗುರುತಿಸಿ ಪೂರ್ಣಗೊಳಿಸುವರು. | 3 | **10)** ಬಣ್ಣದ ಹಾಳೆಗಳಲ್ಲಿ ತಯಾರಿಸಿದ ವಿವಿಧ ಆಕೃತಿಗಳನ್ನು ಬಳಸಿ ವಿನ್ಯಾಸ ಸರಣಿಯನ್ನು ಪೂರ್ಣಗೊಳಿಸುತ್ತಾರೆ.<br>**11)** ವಿವಿಧ ಆಕಾರದ ಎಲೆಗಳನ್ನು ಬಳಸಿ ವಿನ್ಯಾಸ ಸರಣಿಯನ್ನು ಮುಂದುವರಿಸುತ್ತಾರೆ.<br>**12)** ತನ್ನ ಪರಿಸರದಲ್ಲಿ ಸಿಗುವ ಬೇರೆ ಬೇರೆ ಆಕಾರದ ಎಲೆಗಳು, ಕಡ್ಡಿಗಳು, ಹರಳುಗಳನ್ನು ಬಳಸಿ ತನಗಿಷ್ಟವಾದ ವಿನ್ಯಾಸ ರಚಿಸುತ್ತಾರೆ. |
| 5 | 1 ರಿಂದ 10 ರವರೆಗೆ ಎಣಿಕೆ ಮಾಡುವರು.<br>1 ರಿಂದ 10ರವರೆಗಿನ ಸಂಖ್ಯೆಗಳನ್ನು ನಕಲು ಮಾಡುವರು. | 3 | **13)** ತರಗತಿಯಲ್ಲಿ ಕಾಣುವ ಪುಸ್ತಕ, ಕಪ್ಪು ಹಲಗೆ, ಕಿಟಕಿ, ಬಾಗಿಲು ಇತ್ಯಾದಿ ವಸ್ತುಗಳನ್ನು ಎಣಿಸಿ ಹೇಳುತ್ತಾರೆ.<br>**14)** 1 ರಿಂದ 10 ರವರೆಗಿನ ಅಂಕಿ/ಸಂಖ್ಯೆಗಳನ್ನು ಗುರುತಿಸುತ್ತಾರೆ. (ಉದಾ: 1 ರಿಂದ 10 ರವರೆಗಿನ ಅಂಕಿ ಸಂಖ್ಯೆಗಳನ್ನು ಬರೆದು ಒಂದು ಡಬ್ಬಿಯಲ್ಲಿ ಹಾಕಿ ತನಗಿಷ್ಟವಾದ 5 ಚೀಟಿಗಳನ್ನು ತೆಗೆದುಕೊಳ್ಳಲು ತಿಳಿಸಿ ಅದರಲ್ಲಿರುವ ಅಂಕಿ/ಸಂಖ್ಯೆಯನ್ನು ಗುರುತಿಸಲು ಹೇಳಬಹುದು.)<br>**15)** 1 ರಿಂದ 10 ರವರೆಗಿನ ಅಂಕಿ/ಸಂಖ್ಯೆಗಳನ್ನು ನಕಲು ಮಾಡುತ್ತಾರೆ. / ಗಣಿತ ಕಿಟ್‌ನಲ್ಲಿರುವ ವಸ್ತುಗಳನ್ನು ಬಳಸಿ ಸೂಚಿಸಿದ ಸಂಖ್ಯೆಯನ್ನು ಬರೆಯುತ್ತಾರೆ. |

**ಗಮನಕ್ಕೆ : - * ಕಲಿಕಾ ಫಲಕ್ಕೆ ಅನುಗುಣವಾಗಿ ಮೌಲ್ಯಮಾಪನದ ಅಂಶ/ಸೂಚಕಗಳನ್ನು ನೀಡಿದ್ದು ಸುಗಮಕಾರರು ಲಿಖಿತ/ಮೌಖಿಕ/ಲಭ್ಯವಿರುವ ವಸ್ತು/ಪರಿಸರದ ಅಂಶಗಳನ್ನು ಬಳಸಿ ಮೌಲ್ಯಮಾಪನಕ್ಕೆ ಒಳಪಡಿಸುವುದು. * ಪ್ರತಿ ಮೌಲ್ಯಮಾಪನದ ಅಂಶ/ಸೂಚಕಗಳಿಗೆ ಅಂಕಗಳನ್ನು ನಿಗದಿಪಡಿಸಿದ್ದು ಮಗುವಿನ ಪ್ರತಿಕ್ರಿಯೆಗೆ ಅನುಸಾರವಾಗಿ ಅಂಕಗಳನ್ನು ನೀಡುವುದು.**

# ತರಗತಿ : 01 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಗಣಿತ – ವಿದ್ಯಾಪ್ರವೇಶ (IL)- ಶಿಕ್ಷಕರ ವೈಯಕ್ತಿಕ ನಮೂದು ವಹಿ

| ಕ್ರ.ಸಂ | ಕಲಿವಿನ ಫಲ → | 1 | | | 2 | | | 3 | | | 4 | | | 5 | | | ಒಟ್ಟು ಅಂಕಗಳು | ಶೇಕಡಾ | ಶ್ರೇಣಿ |
|---|---|---|---|---|---|---|---|---|---|---|---|---|---|---|---|---|---|---|---|
| | ಮೌಲ್ಯಾಂಕನದ ಅಂಶಗಳ ಕ್ರಮ ಸಂಖ್ಯೆ→ ವಿದ್ಯಾರ್ಥಿಗಳ ಹೆಸರು ↓ | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | | | |
| 01 | | | | | | | | | | | | | | | | | | | |
| 02 | | | | | | | | | | | | | | | | | | | |
| 03 | | | | | | | | | | | | | | | | | | | |
| 04 | | | | | | | | | | | | | | | | | | | |
| 05 | | | | | | | | | | | | | | | | | | | |
| 06 | | | | | | | | | | | | | | | | | | | |
| 07 | | | | | | | | | | | | | | | | | | | |
| 08 | | | | | | | | | | | | | | | | | | | |
| 09 | | | | | | | | | | | | | | | | | | | |
| 10 | | | | | | | | | | | | | | | | | | | |

ವಿಷಯ ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

## ತರಗತಿ: 01 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಆರೋಗ್ಯ ಮತ್ತು ಪರಿಸರ – ವಿದ್ಯಾ ಪ್ರವೇಶ (H&W)

| ಕ್ರ. ಸಂ | ಕಲಿಕಾ ಫಲಗಳು | | ಮೌಲ್ಯಾಂಕನದ ಅಂಶಗಳು/ಸೂಚನೆಗಳು |
|---|---|---|---|
| 1 | ನಿಖರತೆ ಮತ್ತು ನಿಯಂತ್ರಣದೊಂದಿಗೆ ಸೂಕ್ಷ್ಮ ಕರಕುಶಲತೆಯನ್ನು ಪ್ರದರ್ಶಿಸುವರು. | 1 | ಗಣಿತದ ಆಕೃತಿಗಳ ಅಂಚನ್ನು ತಿದ್ದಿ ಪೇಪರ್ ಕೋಲ್ಯಾಜ್ ಮಾಡುತ್ತಾರೆ/ತಮಗೆ ಇಷ್ಟವಾದ ಬಣ್ಣ ತುಂಬುತ್ತಾರೆ. |
| | | 2 | ದಿನಪತ್ರಿಕೆಯಲ್ಲಿಯ ಪ್ರಾಣಿ, ಪಕ್ಷಿಗಳ ಚಿತ್ರಗಳನ್ನು ಸಂಗ್ರಹಿಸಿ ಯೋಜನೆ ತಯಾರಿಸುತ್ತಾರೆ. |
| | | 3 | ಎಲೆ, ಮರ, ಹಣ್ಣು, ಹೂವು ಇತ್ಯಾದಿಗಳಿಂದ ಫಜಲ್‌ಗಳನ್ನು ಜೋಡಿಸುವ ಕುಶಲತೆ ಪ್ರದರ್ಶಿಸುತ್ತಾರೆ. |
| 2 | ಸಮಾಜಮುಖಿ ನಡವಳಿಕೆಯ ವಿಕಾಸ, ಇತರರ ಭಾವನೆ ಮತ್ತು ಹಕ್ಕುಗಳನ್ನು ಗೌರವಿಸುವರು. | 4 | ವಿವಿಧ ಹಬ್ಬಗಳ ಮಿಂಚುಪಟ್ಟಿ ಬಳಸಿ ಐ ಸ್ಪೈ ಆಟದ ಮೂಲಕ ಮನೆಯಲ್ಲಿ ಹಾಗೂ ಶಾಲೆಯಲ್ಲಿ ಆಚರಿಸುವ ಹಬ್ಬಗಳನ್ನು ಗುರುತಿಸುತ್ತಾರೆ. |
| | | 5 | ಮೂಕಾಭಿನಯದ ಮೂಲಕ ನಿತ್ಯ ಜೀವನದಲ್ಲಿ ತಾವು ನೋಡಿದ ವಿವಿಧ ವೃತ್ತಿಗಳನ್ನು ತಿಳಿಸುತ್ತಾರೆ. |
| | | 6 | ಶಿಕ್ಷಕರು ತೋರ್ಪಡಿಸುವ ಮುಖದ ಬೇರೆ ಬೇರೆ ಭಾವನೆಗಳನ್ನು ವೀಕ್ಷಿಸಿ ಅವರಂತೆ ಭಾವನೆಗಳನ್ನು ವ್ಯಕ್ತಪಡಿಸುತ್ತಾರೆ. |
| 3 | ಪ್ರಾಥಮಿಕ ಆರೋಗ್ಯ, ಸ್ವಚ್ಛತೆ ಹಾಗೂ ನೈರ್ಮಲ್ಯದ ಅಭ್ಯಾಸಗಳನ್ನು ಅನುಸರಿಸುವರು. | 7 | ನೈಲ್‌ಕಟರ್, ಬಾಚಣಿಕೆ, ಹಲ್ಲುಜ್ಜುವ ಬ್ರಶ್‌ಗಳ ಕಾರ್ಯದ ಬಗ್ಗೆ ಮಾತನಾಡುತ್ತಾರೆ. ಸುಗಮಕಾರರು ಪಿಕ್ & ಸ್ಪೀಚ್ ಆಟದ ಮಾದರಿಯಲ್ಲಿ ಮಕ್ಕಳಿಗೆ ಅವಕಾಶ ನೀಡಬಹುದು. |
| | | 8 | ಗುಂಪು ಚಟುವಟಿಕೆಯಲ್ಲಿ ಭಾಗವಹಿಸುವುದರ ಮೂಲಕ ಮನೆಯಲ್ಲಿ ಹಾಗೂ ಶಾಲೆಯಲ್ಲಿ ನಿರ್ವಹಿಸುವ ಸ್ವಚ್ಛತಾ ಕಾರ್ಯಗಳ ಬಗ್ಗೆ ಚರ್ಚಿಸುತ್ತಾರೆ. |
| | | 9 | ಚಿತ್ರಗಳು, ವಿಡಿಯೋಗಳನ್ನು ವೀಕ್ಷಿಸುವುದರ ಮೂಲಕ ಶುಚಿತ್ವದ ಕಾರ್ಯಗಳನ್ನು ಅಣಕು ಮಾಡಿ ತೋರಿಸುತ್ತಾರೆ. |
| 4 | ದೇಹದ ವಿವಿಧ ಭಾಗಗಳನ್ನು ಗುರುತಿಸುವರು ಮತ್ತು ಅವುಗಳ ಕಾರ್ಯಗಳನ್ನು ವಿವರಿಸುವರು. | 10 | ಟಿ.ಪಿ.ಆರ್. ಚಟುವಟಿಕೆಯ ಮೂಲಕ ದೇಹದ ಭಾಗಗಳನ್ನು ಗುರುತಿಸುತ್ತಾರೆ. ಉದಾ: ಟಚ್ ಯುವರ್ ನೋಸ್. |
| | | 11 | ದೇಹದ ಭಾಗಗಳಿಗೆ ಸಂಬಂಧಿಸಿದ ಹಾಡನ್ನು ಆಲಿಸಿ ದೇಹದ ಭಾಗಗಳ ಕಾರ್ಯಗಳನ್ನು ತಿಳಿಸುತ್ತಾರೆ. |
| | | 12 | ದೇಹದ ಭಾಗಗಳ ಚುಕ್ಕಿ ಚಿತ್ರಗಳನ್ನು ಪೂರ್ಣಗೊಳಿಸಿ ಸೂಕ್ತವಾದ ಬಣ್ಣ ಹಾಕುತ್ತಾರೆ. |
| 5 | ಸಾರಿಗೆ ಮತ್ತು ಸಾರಿಗೆ ವಿಧಗಳ ಬಗ್ಗೆ ತಿಳಿಯುವರು. | 13 | ಚಿತ್ರಗಳು, ವಿಡಿಯೋಗಳನ್ನು ವೀಕ್ಷಿಸುವುದರ ಮೂಲಕ ವಿವಿಧ ವಾಹನಗಳ ಹೆಸರನ್ನು ಮೌಖಿಕವಾಗಿ ಪಟ್ಟಿ ಮಾಡುತ್ತಾರೆ. |
| | | 14 | ವಾಹನಗಳು ಚಲಿಸುವ ಮಾರ್ಗಗಳನ್ನು ಬಾಂಬೆ ಇನ್ ದ ಸಿಟಿ ಆಟದಲ್ಲಿ ಭಾಗವಹಿಸುವುದರ ಮೂಲಕ ಗುರುತಿಸುತ್ತಾರೆ.<br>ಉದಾ: ಸುಗಮಕಾರರು ವಿಮಾನ ಎಂದಾಗ ಮಗು ವಾಯುಮಾರ್ಗದ ಜಾಗದಲ್ಲಿ ನಿಲ್ಲುವುದು. ಬಸ್ಸು ಎಂದಾಗ ಮಗು ಭೂ ಮಾರ್ಗದ ಜಾಗದಲ್ಲಿ ನಿಲ್ಲುವುದು. |
| | | 15 | ವಾಹನಗಳ ಆಟಿಕೆಗಳಲ್ಲಿ ನಿಧಾನವಾಗಿ ಹಾಗೂ ವೇಗವಾಗಿ ಚಲಿಸುವ ವಾಹನಗಳ ಆಟಿಕೆಗಳನ್ನು ವಿಂಗಡಿಸುತ್ತಾರೆ. |

**ಸೂಚನೆಗಳು:**

1. **ಕಲಿಕಾ ಫಲಕ್ಕೆ ಅನುಗುಣವಾಗಿ ಮೌಲ್ಯಾಂಕನದ ಸೂಚನೆಗಳನ್ನು ನೀಡಿದ್ದು, ಸುಗಮಕಾರರು ಲಿಖಿತ/ಮೌಖಿಕ/ಲಭ್ಯವಿರುವ ವಸ್ತುಗಳ ಆಧಾರವಾಗಿ ಮೌಲ್ಯಾಂಕನಕ್ಕೆ ಒಳಪಡಿಸಬಹುದಾಗಿದೆ.**
2. **ಪ್ರತಿ ಮೌಲ್ಯಾಂಕನದ ಅಂಶ/ಸೂಚನೆಗಳಿಗೆ 1 ಅಂಕಗಳನ್ನು ನಿಗದಿಪಡಿಸಿದ್ದು, ಮಗು ಸರಿಯಾದ ರೀತಿಯಲ್ಲಿ ಪ್ರತಿಕ್ರಿಯೆ ನೀಡಿದ್ದಲ್ಲಿ 1 ಅಂಕವನ್ನು ಅಥವಾ ಹಾಗೆ ಪ್ರತಿಕ್ರಿಯಿಸಲು ಪ್ರಯತ್ನ ಪಟ್ಟಿದ್ದಲ್ಲಿ 1/2 ಅಂಕವನ್ನು ನೀಡುವುದು.**

# ತರಗತಿ :01– ರೂಪಣಾತ್ಮಕ ಮೌಲ್ಯಾಂಕನ (FA) –1 –ವಿಷಯ:ಆರೋಗ್ಯ ಮತ್ತು ಪರಿಸರ (H&W) –ವಿದ್ಯಾ ಪ್ರವೇಶ–ಶಿಕ್ಷಕರ ವೈಯಕ್ತಿಕ ನಮೂದು ವಹಿ

| ಕ್ರ.ಸಂ | ಕಲಿವಿನ ಫಲ → | 1 | | | 2 | | | 3 | | | 4 | | | 5 | | | ಒಟ್ಟು ಅಂಕಗಳು | ಶೇಕಡಾ | ಶ್ರೇಣಿ |
|---|---|---|---|---|---|---|---|---|---|---|---|---|---|---|---|---|---|---|---|
| | ಮೌಲ್ಯಾಂಕನ ಅಂಕಗಳ ಕ್ರಮ ಸಂಖ್ಯೆ→ ↓ ವಿದ್ಯಾರ್ಥಿಗಳ ಹೆಸರು | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | | | |
| 1 | | | | | | | | | | | | | | | | | | | |
| 2 | | | | | | | | | | | | | | | | | | | |
| 3 | | | | | | | | | | | | | | | | | | | |
| 4 | | | | | | | | | | | | | | | | | | | |
| 5 | | | | | | | | | | | | | | | | | | | |
| 6 | | | | | | | | | | | | | | | | | | | |
| 7 | | | | | | | | | | | | | | | | | | | |
| 8 | | | | | | | | | | | | | | | | | | | |
| 9 | | | | | | | | | | | | | | | | | | | |
| 10 | | | | | | | | | | | | | | | | | | | |
| 11 | | | | | | | | | | | | | | | | | | | |
| 12 | | | | | | | | | | | | | | | | | | | |
| 13 | | | | | | | | | | | | | | | | | | | |
| 14 | | | | | | | | | | | | | | | | | | | |
| 15 | | | | | | | | | | | | | | | | | | | |

ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

## ತರಗತಿ: 02 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಕನ್ನಡ

| ಕ್ರ. ಸಂ. | ಕಲಿಕಾಂಶಗಳು/ ಕಲಿಕಾ ಫಲಗಳು | ಅಂಕಗಳು | ಮೌಲ್ಯಾಂಕನದ ಅಂಶಗಳು/ ಸೂಚನೆಗಳು |
|---|---|---|---|
| 1. | ಧ್ವನಿ ಸಂಕೇತಗಳ ಅರಿವು, ಅಕ್ಷರ–ಶಬ್ದ ಸಹ ಸಂಬಂಧ ಅರಿಯುವರು.<br>(ಕನ್ನಡ ವರ್ಣಮಾಲೆಯ ಅಕ್ಷರಗಳನ್ನು ಗುರುತಿಸುವರು.) | 3 | • ಅಕ್ಷರಗಳ ಧ್ವನಿ ಗಮನಿಸಲು ತಿಳಿಸುವುದು. ಚಿತ್ರಗಳನ್ನು ಪ್ರದರ್ಶಿಸಿ ಅವುಗಳ ಹೆಸರಿನ ಮೊದಲ ಅಕ್ಷರಗಳನ್ನು ಗುರುತಿಸಿ ಹೇಳಲು ಅವಕಾಶ ಕಲ್ಪಿಸಬಹುದಾಗಿದೆ.<br>• ಪ್ರತಿ ಮಗುವೂ ತಾನು ಕಲಿತ ಯಾವುದಾದರೂ 10 ಅಕ್ಷರಗಳನ್ನು/ ಕಾಗುಣಿತಾಕ್ಷರಗಳನ್ನು ಉಚ್ಛರಿಸಿ, ಅದರಿಂದ ಪ್ರಾರಂಭವಾಗುವ ಶಬ್ದಗಳನ್ನು ಹೇಳಲು ಅವಕಾಶ ಕಲ್ಪಿಸಬಹುದಾಗಿದೆ.<br>• ಸೂಚಿಸಿದ ಅಕ್ಷರಗಳನ್ನು ವಾರ್ತಾ ಪತ್ರಿಕೆಯಲ್ಲಿ/ ಮ್ಯಾಗಜಿನ್‌ಗಳಲ್ಲಿ ಗುರುತು ಮಾಡಬಹುದಾಗಿದೆ.<br>• ಅಕ್ಷರಗಳನ್ನು ಟ್ರೇಸ್ ಮಾಡಿ ಆ ಅಕ್ಷರವನ್ನು ಉಚ್ಛರಿಸಲು ಅವಕಾಶ ಕಲ್ಪಿಸಬಹುದಾಗಿದೆ.<br>• ಹೇಳಿದ ಸರಳ ಪದದ ಆರಂಭದ ಹಾಗೂ ಅಂತ್ಯದ ಅಕ್ಷರ ಹೇಳುವಂತೆ ತಿಳಿಸಬಹುದಾಗಿದೆ.<br>(ಅಕ್ಷರಗಳ ಗುರುತಿಸುವಿಕೆ, ಸರಿಯಾದ ಧ್ವನಿಯ ಉಚ್ಛಾರ, ಅಕ್ಷರ ಸಂಬಂಧಿತ ಪದಗಳನ್ನು ಆಧರಿಸಿ ಅಂಕಗಳನ್ನು ನಿರ್ಧರಿಸುವುದು) |
| 2. | ಪರಿಚಿತ ಸನ್ನಿವೇಶಗಳ ಚಿತ್ರಗಳನ್ನು ಅವಲೋಕಿಸಿ ಮಾತನಾಡುವರು. (ಕಲ್ಪಿಸಿ/ಊಹಿಸಿ ಮಾತನಾಡುವರು) | 3 | • ವಿವಿಧ ಸನ್ನಿವೇಶಗಳ ಚಿತ್ರಗಳನ್ನು ಸಂಗ್ರಹಿಸಿಟ್ಟುಕೊಂಡು, ಪ್ರತಿ ಮಗುವು ಯಾವುದಾದರೂ ಒಂದು ಸನ್ನಿವೇಶದ ಚಿತ್ರವನ್ನು ಅವಲೋಕಿಸಿ ಮಾತನಾಡಲು ಅವಕಾಶ ಕಲ್ಪಿಸಬಹುದಾಗಿದೆ.<br>• ಶಿಕ್ಷಕರು ಹೇಳಿದ ಸನ್ನಿವೇಶ ಅಥವಾ ಕಥೆಯನ್ನು ಆಲಿಸಿ, ಪುನಃ ತನ್ನದೇ ಮಾತುಗಳಲ್ಲಿ ಅಭಿವ್ಯಕ್ತಿಸಲು ಅವಕಾಶ ಕಲ್ಪಿಸಬಹುದಾಗಿದೆ.<br>• ಮಗುವು ತಾನು ಇಷ್ಟಪಟ್ಟ ಆಟಿಕೆಯ ಕುರಿತು ಮಾತನಾಡಲು ಅವಕಾಶ ಕಲ್ಪಿಸಬಹುದಾಗಿದೆ.<br>• ತರಗತಿ ಕೋಣೆಯಲ್ಲಿರುವ ಯಾವುದಾದರೂ ವಸ್ತುವಿನ ಬಗ್ಗೆ ಮಾತನಾಡುಲು ಅವಕಾಶ ಕಲ್ಪಿಸಬಹುದಾಗಿದೆ.<br>• ಮಗು ನೋಡಿರುವ ಯಾವುದಾದರೂ ಸನ್ನಿವೇಶ ಕುರಿತು ಸಮಯ ನಿಗದಿಪಡಿಸಿ ಮಾತನಾಡಲು ಮುಕ್ತ ಅವಕಾಶ ಕಲ್ಪಿಸಬಹುದಾಗಿದೆ.<br>(ಸ್ಪಷ್ಟ ಉಚ್ಚಾರಣೆ ಮತ್ತು ಸೂಕ್ತ ಅಭಿವ್ಯಕ್ತಿಯನ್ನು ಗಮನಿಸಿ ಅಂಕಗಳನ್ನು ನಿರ್ಧರಿಸುವುದು) |
| 3. | 3–4 ಅಕ್ಷರಗಳುಳ್ಳ ಪದಗಳ ಉಕ್ತಲೇಖನ ತೆಗೆದುಕೊಳ್ಳುವರು. (ಅಕ್ಷರಗಳು, ಗುಣಿತಾಕ್ಷರಗಳು ಹಾಗೂ ಜ್ಜ, ಟ್ಟ, ಣ್ಣ ಒತ್ತಕ್ಷರಗಳನ್ನು ಆಧರಿಸಿ) | 3 | • ಅಕ್ಷರಗಳು, ಗುಣಿತಾಕ್ಷರ ಹಾಗೂ ಒತ್ತಕ್ಷರಗಳನ್ನು ಒಳಗೊಂಡಂತೆ 3–4 ಅಕ್ಷರಗಳುಳ್ಳ ಪದಗಳ ಉಕ್ತಲೇಖನ ನೀಡಿ ಅವುಗಳನ್ನು ಓದಲು ಅವಕಾಶ ನೀಡಬಹುದಾಗಿದೆ.<br>• ನೀಡಿದ ಉಕ್ತಲೇಖನ ಪದಗಳನ್ನು ವಾರ್ತಾ ಪತ್ರಿಕೆಯಲ್ಲಿ /ಮ್ಯಾಗಜಿನ್/ ಓದುವೆ ನಾನು ಕಾರ್ಡು/ ಲಭ್ಯ ಸಾಹಿತ್ಯಗಳಲ್ಲಿ ಗುರುತು ಮಾಡಬಹುದಾಗಿದೆ.<br>• ಆಲಿಸಿದ ಪಠ್ಯದಲ್ಲಿ ತನಗಿಷ್ಟವಾದ 5 ಅಥವಾ ಹೆಚ್ಚು ಪದಗಳನ್ನು ಬರೆದು, ಓದಲು ಅವಕಾಶ ಕಲ್ಪಿಸಬಹುದಾಗಿದೆ.<br>(ವಿವಿಧ ಪದಗಳ ರಚನೆ, ಬರವಣಿಗೆ ಹಾಗೂ ಶುದ್ಧತೆಯನ್ನು ಆಧರಿಸಿ ಅಂಕಗಳನ್ನು ನಿರ್ಧರಿಸುವುದು) |
| 4. | ಸೃಜನಾತ್ಮಕ ಸ್ವ–ಅಭಿವೃದ್ಧಿ, ಧ್ವನಿ ವಿಜ್ಞಾನದ ಅರಿವಿನೊಂದಿಗೆ ಪದ ಸಂಪತ್ತನ್ನು ಅಭಿವೃದ್ಧಿಪಡಿಸಿಕೊಳ್ಳುವರು. (ಅಕ್ಷರಗಳು, ಗುಣಿತಾಕ್ಷರಗಳು ಹಾಗೂ ಜ್ಜ, ಟ್ಟ, ಣ್ಣ ಒತ್ತಕ್ಷರಗಳನ್ನು ಆಧರಿಸಿ ಪದ ರಚಿಸುವರು) | 3 | • ಪದಜಾಲವನ್ನು ಸಿದ್ಧಪಡಿಸಿಕೊಂಡು ಅದರಲ್ಲಿ ವಿವಿಧ ಪದಗಳನ್ನು ಗುರುತಿಸಿ, ಬರೆಯಲು ಅವಕಾಶ ಕಲ್ಪಿಸಬಹುದಾಗಿದೆ.<br>• ಹೇಳಿದ ಪದಕ್ಕೆ ಪೂರಕವಾಗಿ, ಸೂಚಿಸಿದ ಧ್ವನಿಗೆ ಹೋಲಿಕೆಯಾಗುವಂತೆ ಹೆಚ್ಚಿನ ಪದಗಳನ್ನು ಹೇಳಿಸಿ, ಬರೆಯಲು ಅವಕಾಶ ಕಲ್ಪಿಸಬಹುದಾಗಿದೆ. ಉದಾ: ಅಮರ ಪದದಲ್ಲಿ ಮ ಧ್ವನಿಯನ್ನು ಸೂಚಿಸಿದರೆ...ಸಮಯ, ಭಾಮ, ಸಂಗಮ, ಮನುಜ ಇತ್ಯಾದಿ.<br>• ವಿವಿಧ ಅಕ್ಷರಗಳ ಮಿಂಚುಪಟ್ಟಿಗಳ ಗುಂಪುಗಳನ್ನು ನೀಡಿ, ಆ ಅಕ್ಷರಗಳ ಸಹಾಯದಿಂದ 3–4 ಅಕ್ಷರಗಳ ವಿವಿಧ ಪದಗಳನ್ನು ರಚಿಸಿ ಬರೆಯುವಂತೆ ತಿಳಿಸಬಹುದಾಗಿದೆ.<br>• ನೀಡಿದ ಪದದ ಅಂತ್ಯಾಕ್ಷರ ಬಳಸಿ ಪದಬಳ್ಳಿ ರಚಿಸಲು ಅವಕಾಶ ನೀಡಬಹುದಾಗಿದೆ. |

| | | | |
|---|---|---|---|
| | | | (ಪದಗಳ ಬರವಣಿಗೆ, ನಿಖರತೆಯನ್ನು ಆಧರಿಸಿ ಅಂಕಗಳನ್ನು ನಿರ್ಧರಿಸುವುದು) |
| **5.** | **ಪದಗಳಿಂದ ವಾಕ್ಯ ರಚನೆ ಮಾಡುವರು. (ಅಕ್ಷರಗಳು, ಗುಣಿತಾಕ್ಷರಗಳು ಹಾಗೂ ಜ್ಜ, ಟ್ಟ, ಣ್ಣ ಒತ್ತಕ್ಷರಗಳನ್ನು ಆಧರಿಸಿ)** | **3** | • ವಿವಿಧ ಪದಗಳ ಕೋಷ್ಟಕ ತಯಾರಿಸಿಕೊಂಡು ಅವುಗಳ ಸಹಾಯದಿಂದ ವಾಕ್ಯಗಳನ್ನು ರಚಿಸಲು ಅವಕಾಶ ಕಲ್ಪಿಸಬಹುದಾಗಿದೆ.<br>• ಪದ ಸುಳಿವುಗಳ ಆಧಾರದಲ್ಲಿ ವಾಕ್ಯ ರಚನೆಗೆ ಅವಕಾಶ ಕಲ್ಪಿಸಬಹುದಾಗಿದೆ. ಉದಾ: ಬಾಲಕ → ರೊಟ್ಟಿ → ತಿನ್ನು<br>• ಚಿತ್ರ ಪದ ಸುಳಿವುಗಳ ಆಧಾರದಲ್ಲಿ ವಾಕ್ಯ ರಚನೆಗೆ ಅವಕಾಶ ಕಲ್ಪಿಸಬಹುದಾಗಿದೆ.<br>• ಸನ್ನಿವೇಶದ ಚಿತ್ರವನ್ನು ಅವಲೋಕಿಸಿ ವಾಕ್ಯಗಳ ರಚನೆಗೆ ಅವಕಾಶ ಕಲ್ಪಿಸಬಹುದಾಗಿದೆ.<br>(ಬರೆದಿರುವ ಕನಿಷ್ಟ 3–4 ಅರ್ಥಪೂರ್ಣ ವಾಕ್ಯಗಳನ್ನು ಆಧರಿಸಿ ಅಂಕಗಳನ್ನು ನಿರ್ಧರಿಸುವುದು.) |

# ತರಗತಿ: 02 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಕನ್ನಡ – ಶಿಕ್ಷಕರ ವೈಯಕ್ತಿಕ ನಮೂದು ವಹಿ

| ಕ್ರ.ಸಂ | ಕಲಿಕಾ ಫಲಗಳು → | 1 | 2 | 3 | 4 | 5 | ಒಟ್ಟು ಅಂಕಗಳು | ಶೇಕಡಾ | ಶ್ರೇಣಿ |
|---|---|---|---|---|---|---|---|---|---|
| | ನಿಗದಿಪಡಿಸಿದ ಅಂಕಗಳು → ವಿದ್ಯಾರ್ಥಿಗಳ ಹೆಸರು ↓ | 03 | 03 | 03 | 03 | 03 | | | |
| 01 | | | | | | | | | |
| 02 | | | | | | | | | |
| 03 | | | | | | | | | |
| 04 | | | | | | | | | |
| 05 | | | | | | | | | |
| 06 | | | | | | | | | |
| 07 | | | | | | | | | |
| 08 | | | | | | | | | |
| 09 | | | | | | | | | |
| 10 | | | | | | | | | |
| 11 | | | | | | | | | |
| 12 | | | | | | | | | |
| 13 | | | | | | | | | |
| 14 | | | | | | | | | |
| 15 | | | | | | | | | |

ವಿಷಯ ಶಿಕ್ಷಕರ ಸಹಿ

ಮುಖ್ಯಶಿಕ್ಷಕರ ಸಹಿ

## ತರಗತಿ: 03 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಕನ್ನಡ

| ಕ್ರ. ಸಂ. | ಕಲಿಕಾಂಶ/ ಕಲಿಕಾ ಫಲಗಳು | ಅಂಕಗಳು | ಮೌಲ್ಯಾಂಕನದ ಅಂಶಗಳು/ ಸೂಚನೆಗಳು |
|---|---|---|---|
| 1. | **ಪರಿಚಿತ ಸನ್ನಿವೇಶಗಳ ಚಿತ್ರಗಳನ್ನು ಅವಲೋಕಿಸಿ ಮಾತನಾಡುವರು. (ಕಲ್ಪಿಸಿ/ ಊಹಿಸಿ ಮಾತನಾಡುವರು)** | 03 | • ಪರಿಚಿತ ಸನ್ನಿವೇಶಗಳ ಚಿತ್ರಗಳನ್ನು ಸಂಗ್ರಹಿಸಿಟ್ಟುಕೊಂಡು, ಪ್ರತಿ ಮಗುವು ಯಾವುದಾದರೂ ಒಂದು ಸನ್ನಿವೇಶದ ಚಿತ್ರವನ್ನು ಅವಲೋಕಿಸಿ ಮಾತನಾಡಲು ಅವಕಾಶ ಕಲ್ಪಿಸಬಹುದಾಗಿದೆ. ಉದಾ: ಹಳ್ಳಿ, ಕೃಷಿ, ನಗರ ಪ್ರದೇಶ, ಸಂತೆ, ದಿನಾಚರಣೆಗಳು ಇತ್ಯಾದಿ.<br>• ಚಿತ್ರಸರಣಿ (ಕಥೆ/ ಸನ್ನಿವೇಶ)ಗಳನ್ನು ಬಳಸಿಕೊಂಡು ಅವುಗಳ ಬಗ್ಗೆ ಮಾತನಾಡಿಸಬಹುದಾಗಿದೆ. ಉದಾ: ಕಥೆಗಳ ಚಾರ್ಟ್, ಕಥಾಪುಸ್ತಕ, ಸನ್ನಿವೇಶದ ಕಾರ್ಡುಗಳು, ವ್ಯಂಗ್ಯ ಚಿತ್ರ ಇತ್ಯಾದಿ.<br>• ತನ್ನ ಇಷ್ಟದ ವಸ್ತು/ ಆಟಿಕೆಗಳನ್ನು ಬಳಸಿಕೊಂಡು ಅವುಗಳು ತಾನೇ ಎಂದು ಭಾವಿಸಿಕೊಂಡು ಮಾತನಾಡುವಂತೆ ಮಾಡಬಹುದಾಗಿದೆ.<br>• ತರಗತಿ ಕೋಣೆಯಲ್ಲಿರುವ ಯಾವುದಾದರೂ ವಸ್ತುವಿನ ಬಗ್ಗೆ ಮಾತನಾಡುಲು ಅವಕಾಶ ಕಲ್ಪಿಸಬಹುದಾಗಿದೆ.<br>• ಚಿತ್ರಗಳ ಬಗ್ಗೆ ಮಾತನಾಡಲು ಅಗತ್ಯ ಸೂಚನೆಗಳನ್ನು ನೀಡಿ, ಸಮಯ ನಿಗದಿಪಡಿಸಿ ಮಾತನಾಡಲು ಮುಕ್ತ ಅವಕಾಶ ನೀಡುವುದು. (ಸ್ಪಷ್ಟ ಉಚ್ಚಾರಣೆ ಮತ್ತು ಸೂಕ್ತ ಅಭಿವ್ಯಕ್ತಿಯನ್ನು ಗಮನಿಸಿ ಅಂಕಗಳನ್ನು ನಿರ್ಧರಿಸುವುದು) |
| 2. | **ಎಫ್.ಎಲ್.ಎನ್ ಚಟುವಟಿಕೆ ಆಧಾರಿತವಾಗಿ ಹಿಂದಿನ ತರಗತಿಯ ಅಕ್ಷರ, ಗುಣಿತಾಕ್ಷರ, ಒತ್ತಕ್ಷರಗಳು, ಪದ, ವಾಕ್ಯ, ಸರಳ ಕಥೆಗಳನ್ನು ಓದುವರು.** | 03 | • ಅಕ್ಷರಗಳು, ಗುಣಿತಾಕ್ಷರಗಳು, ಒತ್ತಕ್ಷರಗಳು, ಪದಗಳು, ವಾಕ್ಯಗಳು, ಸರಳ ಕಥೆಗಳು ಮುಂತಾದವುಗಳನ್ನು ಓದಿಸಬಹುದಾಗಿದೆ. ಉದಾ: 1 ಮತ್ತು 2ನೇ ತರಗತಿಯ ಚಿತ್ರಪದ ಮತ್ತು ಸಾಧನ ಕಾರ್ಡುಗಳು, ವಾಚಕಗಳು, ಓದುವೆ ನಾನು ಕಾರ್ಡುಗಳು ಮತ್ತು ಸರಳ ಕಥೆ ಪುಸ್ತಕಗಳು ಇತ್ಯಾದಿ.<br>• ಮಕ್ಕಳ ನಿಯತಕಾಲಿಕೆಗಳನ್ನು ಓದಿಸಬಹುದಾಗಿದೆ.<br>• ದಿನಪತ್ರಿಕೆಯ ಮುಖ್ಯಾಂಶಗಳು, ಶಾಲಾ ಪ್ರದರ್ಶನ ಫಲಕಗಳಲ್ಲಿನ ಅಂಶಗಳನ್ನು ಓದಿಸಬಹುದಾಗಿದೆ.<br>(ಸ್ಪಷ್ಟ ಉಚ್ಚಾರಣೆ, ಧ್ವನಿಯ ಏರಿಳಿತ, ಓದುವ ವೇಗ ಹಾಗೂ ಹಾವಭಾವಗಳನ್ನು ಆಧರಿಸಿ ಅಂಕಗಳನ್ನು ನಿರ್ಧರಿಸುವುದು) |
| 3. | **3–4 ಅಕ್ಷರಗಳುಳ್ಳ ಪದಗಳ ಉಕ್ತಲೇಖನ ತೆಗೆದುಕೊಳ್ಳುವರು.** | 03 | • ಅಕ್ಷರಗಳು, ಗುಣಿತಾಕ್ಷರ ಹಾಗೂ ಒತ್ತಕ್ಷರಗಳನ್ನು ಒಳಗೊಂಡಂತೆ 3–4 ಅಕ್ಷರಗಳುಳ್ಳ ಪದಗಳ ಉಕ್ತಲೇಖನ ನೀಡಿ ಅವುಗಳನ್ನು ಓದಲು ಅವಕಾಶ ನೀಡಬಹುದಾಗಿದೆ.<br>• ನೀಡಿದ ಉಕ್ತಲೇಖನ ಪದಗಳನ್ನು ದಿನ ಪತ್ರಿಕೆಯಲ್ಲಿ/ ಮಕ್ಕಳ ನಿಯತಕಾಲಿಕೆಗಳಲ್ಲಿ ಗುರುತು ಮಾಡಿಸಬಹುದಾಗಿದೆ.<br>• ಆಲಿಸಿದ ಪಠ್ಯದಲ್ಲಿ ತನಗಿಷ್ಟವಾದ 5 ಅಥವಾ ಹೆಚ್ಚು ಪದಗಳನ್ನು ಬರೆದು, ಓದಲು ಅವಕಾಶ ಕಲ್ಪಿಸಬಹುದಾಗಿದೆ. (ವಿವಿಧ ಪದಗಳ ರಚನೆ, ಬರವಣಿಗೆ ಹಾಗೂ ಶುದ್ಧತೆಯನ್ನು ಆಧರಿಸಿ ಅಂಕಗಳನ್ನು ನಿರ್ಧರಿಸುವುದು)<br>• ಗೆಳೆಯರು ಹೇಳಿದ 3–4 ಅಕ್ಷರಗಳುಳ್ಳ ಪದಗಳನ್ನು ಬರೆಸಬಹುದಾಗಿದೆ.<br>• ದಿನಪತ್ರಿಕೆಯನ್ನು ಮಕ್ಕಳಿಗೆ ನೀಡಿ, ಶಿಕ್ಷಕರು ಹೇಳಿದ ಪದಗಳನ್ನು, ವಾಕ್ಯಗಳನ್ನು ಗುರುತಿಸಿ ಬಣ್ಣ ಹಾಕುವಂತೆ ಮಾಡಬಹುದಾಗಿದೆ.<br>(ಅಕ್ಷರಗಳು, ಗುಣಿತಾಕ್ಷರಗಳು, ಒತ್ತಕ್ಷರಗಳುಳ್ಳ 3–4 ಅಕ್ಷರಗಳ ಅರ್ಥಪೂರ್ಣ ಪದಗಳ ಬರವಣಿಗೆಯನ್ನು ಆಧರಿಸಿ ಅಂಕಗಳನ್ನು ನೀಡಬಹುದಾಗಿದೆ.) |
| 4. | **ಅಕ್ಷರಗಳಿಂದ ಪದರಚನೆ,** | 03 | • ಗುಣಿತಾಕ್ಷರ ಮತ್ತು ಒತ್ತಕ್ಷರಗಳುಳ್ಳ ಕೆಲವೊಂದು ಅಕ್ಷರಗಳನ್ನು ನೀಡಿ, ಅವುಗಳಿಂದ ಪದಗಳನ್ನು ಮತ್ತು ವಾಕ್ಯಗಳನ್ನು ರಚನೆ ಮಾಡಿಸಬಹುದಾಗಿದೆ. |

| | | | |
|---|---|---|---|
| | **ಪದಗಳಿಂದ ವಾಕ್ಯ ರಚನೆ ಮಾಡುವರು.** | | • ಅಕ್ಷರ, ಗುಣಿತಾಕ್ಷರ ಮತ್ತು ಒತ್ತಕ್ಷರಗಳುಳ್ಳ ಪದಗಳ ಕೋಷ್ಟಕ ತಯಾರಿಸಿಕೊಂಡು ಅವುಗಳ ಸಹಾಯದಿಂದ ವಾಕ್ಯಗಳನ್ನು ರಚಿಸಲು ಅವಕಾಶ ಕಲ್ಪಿಸಬಹುದಾಗಿದೆ.<br>• ಆರಂಭದ ಮತ್ತು ಅಂತ್ಯದ ಪದಗಳ ಸಹಾಯದಿಂದ ಪದ ಮತ್ತು ವಾಕ್ಯ ರಚನೆಗೆ ಅವಕಾಶ ಕಲ್ಪಿಸಬಹುದಾಗಿದೆ. ಉದಾ: ಬಾಲಕ → ರೊಟ್ಟಿ → ತಿನ್ನು.... ಬಾಲಕ ರೊಟ್ಟಿ ತಿನ್ನುತ್ತಿದ್ದಾನೆ.<br>• ಚಿತ್ರ ಪದ ಸುಳಿವುಗಳ ಆಧಾರದಲ್ಲಿ ವಾಕ್ಯ ರಚನೆಗೆ ಅವಕಾಶ ಕಲ್ಪಿಸಬಹುದಾಗಿದೆ.<br>• ಸನ್ನಿವೇಶದ ಚಿತ್ರವನ್ನು ಅವಲೋಕಿಸಿ ವಾಕ್ಯಗಳ ರಚನೆಗೆ ಅವಕಾಶ ಕಲ್ಪಿಸಬಹುದಾಗಿದೆ.<br>(ಕನಿಷ್ಟ 3–4 ಅರ್ಥಪೂರ್ಣ ಪದಗಳು ಮತ್ತು ವಾಕ್ಯಗಳನ್ನು ಆಧರಿಸಿ ಅಂಕಗಳನ್ನು ನಿರ್ಧರಿಸುವುದು) |
| **5.** | **ವಾಕ್ಯ/ ವಾಕ್ಯ ಖಂಡಿಕೆಗಳನ್ನು ಆಲಿಸಿ ಬರೆಯುವರು.** | **03** | • ಸರಳ ಕಥೆಗಳಲ್ಲಿನ 3–4 ವಾಕ್ಯ ಖಂಡಿಕೆಗಳನ್ನು ಉಕ್ತಲೇಖನ ನೀಡಬಹುದಾಗಿದೆ.<br>• ಶಿಕ್ಷಕರು ಹೇಳಿದ ಸನ್ನಿವೇಶ ಅಥವಾ ಕಥೆಯನ್ನು ಆಲಿಸಿ, ಬರೆಯಲು ಅವಕಾಶ ಕಲ್ಪಿಸಬಹುದಾಗಿದೆ.<br>• ಸರಳ ಕಥೆಗಳ/ ಶಿಶುಗೀತೆಗಳ ಆಡಿಯೋವನ್ನು ಕೇಳಿಸಿ, ಬರೆಯುವಂತೆ ಮಾಡಬಹುದಾಗಿದೆ.<br>• ವಾಚಕಗಳನ್ನು ಇತರ ಮಕ್ಕಳಿಂದ ಓದಿಸಿ, ವಾಕ್ಯಗಳನ್ನು ಬರೆಯುವಂತೆ ಮಾಡಬಹುದಾಗಿದೆ.<br>• ಶಾಲಾ ಪ್ರಾರ್ಥನಾ ಸಮಯದಲ್ಲಿ ಆಲಿಸಿದ ಗಾದೆಗಳು, ಒಗಟುಗಳು, ನುಡಿಮುತ್ತುಗಳನ್ನು ಬರೆಯಲು ಅವಕಾಶ ಕಲ್ಪಿಸಬಹುದಾಗಿದೆ.<br>(ಅರ್ಥಪೂರ್ಣ ವಾಕ್ಯಗಳ ರಚನೆಯನ್ನು ಆಧರಿಸಿ ಅಂಕಗಳನ್ನು ನಿರ್ಧರಿಸುವುದು) |

# ತರಗತಿ: 03 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಕನ್ನಡ – ಶಿಕ್ಷಕರ ವೈಯಕ್ತಿಕ ನಮೂದು ವಹಿ

| ಕ್ರ.ಸಂ | ಕಲಿಕಾ ಫಲಗಳು → | 1 | 2 | 3 | 4 | 5 | ಒಟ್ಟು ಅಂಕಗಳು | ಶೇಕಡಾ | ಶ್ರೇಣಿ |
|---|---|---|---|---|---|---|---|---|---|
| | ನಿಗದಿಪಡಿಸಿದ ಅಂಕಗಳು →<br>ವಿದ್ಯಾರ್ಥಿಗಳ ಹೆಸರು ↓ | 03 | 03 | 03 | 03 | 03 | | | |
| 01 | | | | | | | | | |
| 02 | | | | | | | | | |
| 03 | | | | | | | | | |
| 04 | | | | | | | | | |
| 05 | | | | | | | | | |
| 06 | | | | | | | | | |
| 07 | | | | | | | | | |
| 08 | | | | | | | | | |
| 09 | | | | | | | | | |
| 10 | | | | | | | | | |
| 11 | | | | | | | | | |
| 12 | | | | | | | | | |
| 13 | | | | | | | | | |
| 14 | | | | | | | | | |
| 15 | | | | | | | | | |

ವಿಷಯ ಶಿಕ್ಷಕರ ಸಹಿ

ಮುಖ್ಯಶಿಕ್ಷಕರ ಸಹಿ

**CLASS-1** **FA-1 LEARNING INDICATORS** **Subject: English**

| SL.NO. | Learning indicators | Assigned marks | Instructions for assessment |
|---|---|---|---|
| 1 | **Recites rhymes in group** | 3 | • Ask the students to recite rhymes in group with actions. Make sure that every child is reciting the rhyme with appropriate actions.<br>• Teacher may sing the first line and ask the learners to recite the second line.<br>• Make two groups. Ask a group to sing the first line and other to sing the second line. Continue till the end of the rhyme. This will make the children more comfortable. |
| 2 | **Responds to simple instructions** | 3 | • Give simple instructions in groups. Eg: sit down, stand up, clap, jump, clap twice etc.<br>• Teacher may also use gestures to make it easier. Observe the response of every child. |
| 3 | **Takes part in conversational activities** | 3 | • Use the greetings like good morning, good afternoon, good evening, hi, hello with the class and ask the children when we use these greetings in day-to-day life. (Children can answer bilingually).<br>• Make the learners to ask simple questions to his/her partner and answer in the conversation circle.<br>Questions:<br>1. What's your name? My name is ………..<br>2. How are you? I am fine. Thank you.<br>• Make sure that every child is involved in the activity. |
| 4 | **Responds bilingually to simple questions based on story** | 3 | • Narrate the story bilingually to the whole class.<br>• Ask simple questions based on story.<br>• Children may answer bilingually. |
| 5 | **Participates in language game activity** | 3 | • Make the learners to play the language game **'Fire on the Mountain'**<br>• Make sure that every child is following the rules of the game.<br>• Observe the participation of every child. |
| | **Total** | **15** | |

**CLASS-2** **FA-1 LEARNING INDICATORS** **Subject: English**

| SL.NO. | Learning indicators | Assigned marks | Instructions for assessment |
|---|---|---|---|
| 1 | **Recognizes the sight words (L & S)** | 3 | • Show the Sight word flashcards and ask the learners to recognize them.<br>• Use any six sight words per student.<br>• Teachers may also use the sight word teaching activities and language games in groups. Response of each child is to be observed. |
| 2 | **Understands the grammar concept (L & S)** | 3 | • Use the grammar card numbers 9, 16, 23, 30, 44 in groups.<br>• Teachers may also use the suggested conversation activities and language games in groups. Response of each child is to be observed. |
| 3 | **Recognizes the letters and sound combination** | 3 | • Use the picture cards and ask the learners to identify the beginning sounds.<br>• Use all 26 letter cards and ask the students to pick a letter according to the sound uttered by the teacher.<br>• Ask the children to pick any letter card from all 26 letter cards and recognize the name and corresponding sound. |
| 4 | **Reads & Writes words using word families** | 3 | • Use the stories of level 1 and ask the learners to circle the sight words and words having word families like AT, OT, OP, EN etc.<br>• Dictate any 6 words of level 1.<br>• Ask the students to read the dictated words.<br>• Ask the meaning of dictated words. |
| 5 | **Reads the sentences** | 3 | • Write any 6 sentences on the blackboard.( Sentences to be taken from the stories of level-1)<br>• Ask the students to read any 3 sentences.<br>• Elicit the meaning of the sentences (bilingually). |
| | **Total** | **15** | |

**CLASS-3** **FA-1 LEARNING INDICATORS** **Subject: English**

| SL.NO.. | Learning indicators | Assigned marks | Instructions for assessment |
|---|---|---|---|
| 1 | **Recognizes the sight words (L & S)** | 3 | • Show the Sight word flashcards and ask the learners to recognize them.<br>• Use any six sight words per student.<br>• Teachers may also use the sight word teaching activities and language games in groups. Response of each child is to be observed. |
| 2 | **Understands the grammar concept (L & S)** | 3 | • Use the grammar card numbers 9, 16, 23, 30, 44 in groups.<br>• Teachers may also use the suggested conversation activities and language games in groups. Response of each child is to be observed. |
| 3 | **Read words which have long vowels, blends & digraphs** | 3 | • Ask the learners to read the words having Long vowels, Blends and digraphs.<br>• A child should read a minimum of 10 words.<br>• Ask the meaning of each word. |
| 4 | **Writes the words which have long vowels, blends & digraphs** | 3 | • Use the stories of level 2 and ask the learners to circle the words having long vowels, blends and digraphs.<br>• Dictate 10-15 words having Long vowels, Blends and digraphs.<br>• Ask about the meaning of dictated words. |
| 5 | **Writes sight words** | 3 | • Use the stories of level 2 and ask the learners to circle the sight words.<br>• Dictate any 10 sight words.<br>• Ask the meaning of the sight words. |
| | **Total** | **15** | |

**Note: *Teachers may give the marks based on the performance of the child in each Learning Indicator.**

*** Excellent- 3 Good-2 Average- 1**

*** Consider all 15 points and calculate FA-1 result as mentioned below.**

| **Grading** | |
|---|---|
| A+ | 14-15 |
| A | 11-13 |
| B+ | 8-10 |
| B | 5-7 |
| C | 1-4 |

Example for Assessment Rating scale for **LEVEL-1**

| **Student name** | **Rhymes** | **TPR (Instructions)** | **Conversations** | **Story** | **Language games** | **Total** | **Grade** |
|---|---|---|---|---|---|---|---|
| ABCD | 3 | 2 | 3 | 2 | 3 | 13 | A |
| XYZ | 3 | 3 | 3 | 2 | 3 | 14 | A+ |
| PQRS | 2 | 3 | 2 | 3 | 2 | 12 | A |

Example for Assessment Rating scale for **LEVEL-2**

| **Student name** | **Sight words** | **Grammar concept** | **Letter-sound combination** | **Word families** | **Reading sentences** | **Total** | **Grade** |
|---|---|---|---|---|---|---|---|
| ABCD | 3 | 2 | 3 | 2 | 3 | 13 | A |
| XYZ | 3 | 3 | 3 | 2 | 3 | 14 | A+ |
| PQRS | 2 | 2 | 2 | 2 | 2 | 10 | B+ |

Example for Assessment Rating scale for **LEVEL-3**

| **Student name** | **Sight words** | **Grammar concept** | **Reading long vowels, blends and digraphs** | **Writing long vowels, blends and digraphs** | **Writing sight words** | **Total** | **Grade** |
|---|---|---|---|---|---|---|---|
| ABCD | 2 | 3 | 2 | 2 | 3 | 12 | A |
| XYZ | 3 | 3 | 3 | 2 | 3 | 14 | A+ |
| PQRS | 2 | 2 | 2 | 2 | 2 | 10 | B+ |

**CLASS-1** **Teachers individual marks list FA-1** **Subject: English**

| Sl.No. | Learning Indicators → / Max. Marks → / Student Name ↓ | Rhymes | TPR (Instructions) | Conversations | Story | Language games | Total | Grade |
|---|---|---|---|---|---|---|---|---|
| | | 03 | 03 | 03 | 03 | 03 | 15 | |
| 01 | | | | | | | | |
| 02 | | | | | | | | |
| 03 | | | | | | | | |
| 04 | | | | | | | | |
| 05 | | | | | | | | |
| 06 | | | | | | | | |
| 07 | | | | | | | | |
| 08 | | | | | | | | |
| 09 | | | | | | | | |
| 10 | | | | | | | | |
| 11 | | | | | | | | |
| 12 | | | | | | | | |

**Teacher's Signature** **Head Master's Signature**

**CLASS-2** **Teachers individual marks list FA-1** **Subject: English**

| Sl.No. | Learning Indicators → | Sight words | Grammar Concept | Letter-sound combination | Word families | Reading sentences | Total | Grade |
|---|---|---|---|---|---|---|---|---|
| | Max. Marks →<br>Student Name ↓ | 03 | 03 | 03 | 03 | 03 | 15 | |
| 01 | | | | | | | | |
| 02 | | | | | | | | |
| 03 | | | | | | | | |
| 04 | | | | | | | | |
| 05 | | | | | | | | |
| 06 | | | | | | | | |
| 07 | | | | | | | | |
| 08 | | | | | | | | |
| 09 | | | | | | | | |
| 10 | | | | | | | | |
| 11 | | | | | | | | |
| 12 | | | | | | | | |

**Teacher's Signature** **Head Master's Signature**

**CLASS-3** **Teachers individual marks list FA-1** **Subject: English**

| Sl.No. | Learning Indicators → | Sight words | Grammar Concept | Reading long vowels, blends and digraphs | Writing long vowels, blends and digraphs | Writing sight words | Total | Grade |
|---|---|---|---|---|---|---|---|---|
| | Max. Marks → <br> Student Name ↓ | 03 | 03 | 03 | 03 | 03 | 15 | |
| 01 | | | | | | | | |
| 02 | | | | | | | | |
| 03 | | | | | | | | |
| 04 | | | | | | | | |
| 05 | | | | | | | | |
| 06 | | | | | | | | |
| 07 | | | | | | | | |
| 08 | | | | | | | | |
| 09 | | | | | | | | |
| 10 | | | | | | | | |
| 11 | | | | | | | | |
| 12 | | | | | | | | |

**Teacher's Signature** **Head Master's Signature**

# ತರಗತಿ: 02 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಗಣಿತ

| ಕ್ರ.ಸಂ | ಕಲಿಕಾ ಫಲಗಳು | ನಿಗದಿಪಡಿಸಿದ ಅಂಕಗಳು | ಮೌಲ್ಯಾಂಕನದ ಅಂಶಗಳು/ಸೂಚನೆಗಳು |
|---|---|---|---|
| 1 | * 19 ರವರೆಗಿನ ಸಂಖ್ಯೆಗಳನ್ನು ಸಂಖ್ಯಾಸೂಚಕಗಳಲ್ಲಿ ಗುರುತಿಸುವರು ಮತ್ತು ಬರೆಯುವರು.<br>* 19 ರವರೆಗಿನ ಸಂಖ್ಯೆಗಳಲ್ಲಿ ಹೆಚ್ಚು–ಕಡಿಮೆ–ಸಮ, ಹಿಂದೆ–ಮುಂದೆ–ಮಧ್ಯೆ, ಏರಿಕೆ–ಇಳಿಕೆ, ಸ್ಥಾನಬೆಲೆ ಮತ್ತು ಕ್ರಮವಾಚಕಗಳನ್ನು ಗುರುತಿಸಿ ಬರೆಯುವರು. | 4 | * ತನ್ನ ಶಾಲಾ ಬ್ಯಾಗ್‌ನಲ್ಲಿರುವ ಪುಸ್ತಕಗಳನ್ನು ಎಣಿಕೆ ಮಾಡಿ ಬರೆಯಲು/ಹೇಳಲು ತಿಳಿಸಬಹುದಾಗಿದೆ. (ಕಿಟಕಿಯ ಸರಳು, ಕಿಟಕಿಗಳು, ವಾಹನಗಳ ಚಕ್ರಗಳ ಸಂಖ್ಯೆ ಇತ್ಯಾದಿ)<br>* ಮಿಂಚುಪಟ್ಟಿಗಳನ್ನು ಬಳಸಿ ಸಂಖ್ಯೆಗಳ ವಿವಿಧ ಚಟುವಟಿಕೆಗಳನ್ನು ನಿರ್ವಹಿಸಲು ತಿಳಿಸಬಹುದಾಗಿದೆ. ಉದಾ: ಮಿಂಚು ಪಟ್ಟಿಗಳನ್ನು ನೆಲದ ಮೇಲೆ ಇಟ್ಟು ಅದರ ಹಿಂದಿನ ಸಂಖ್ಯೆ, ಮುಂದಿನ ಸಂಖ್ಯೆ ಗುರುತಿಸಿ ಇಡಲು ಸೂಚಿಸಬಹುದಾಗಿದೆ.<br>* ತನ್ನ 5 ಜನ ಗೆಳೆಯರ ಮನೆಯಲ್ಲಿನ ಸದಸ್ಯರ ಸಂಖ್ಯೆ ಕೇಳಿ, ಯಾರ ಮನೆಯಲ್ಲಿ ಹೆಚ್ಚು–ಕಡಿಮೆ–ಸಮ ಜನರಿದ್ದಾರೆ ಎಂದು ಕೇಳಬಹುದಾಗಿದೆ.<br>* ಸಂಖ್ಯಾ ಮಿಂಚುಪಟ್ಟಿಗಳನ್ನು ಮಕ್ಕಳಿಗೆ ನೀಡಿ ಅವುಗಳನ್ನು ಏರಿಕೆ–ಇಳಿಕೆ ಕ್ರಮದಲ್ಲಿ ಜೋಡಿಸಲು ತಿಳಿಸಬಹುದಾಗಿದೆ. (ಪ್ರತಿ ಮಗುವಿಗೆ ಒಂದೊಂದು ಸಂಖ್ಯಾ ಮಿಂಚುಪಟ್ಟಿ ನೀಡಿ ಅವರನ್ನು ಏರಿಕೆ–ಇಳಿಕೆ ಕ್ರಮದಲ್ಲಿ ನಿಲ್ಲುವಂತೆ ಸೂಚನೆ ನೀಡಬಹುದಾಗಿದೆ.)<br>* ಮಿಂಚುಪಟ್ಟಿ/ಕಪ್ಪು ಹಲಗೆಯ ಮೇಲೆ ಸಂಖ್ಯೆಗಳನ್ನು ಬರೆದು ಅಡಿಗೆರೆ ಎಳೆದ ಸಂಖ್ಯೆಯ ಸ್ಥಾನ ಬೆಲೆ ಗುರುತಿಸಲು ತಿಳಿಸಬಹುದಾಗಿದೆ. |
| 2 | 0 ಯಿಂದ 19 ರ ಒಳಗಿನ ಸಂಖ್ಯೆಗಳ ವ್ಯಾಪ್ತಿ ಮೀರದಂತೆ ಲಿಖಿತವಾಗಿ ಮತ್ತು ಮೌಖಿಕವಾಗಿ ಮೂಲಕ್ರಿಯೆಗಳನ್ನು ಮಾಡುವರು. (ಸಂಕಲನ, ವ್ಯವಕಲನ, ಪುನರಾವರ್ತಿತ, ಗುಣಾಕಾರ, ಭಾಗಾಕಾರ) | 4 | * ಮೊತ್ತ 19ಕ್ಕೆ ಮೀರದಂತೆ ಸರಳ ಲಿಖಿತ ಮತ್ತು ನಿತ್ಯ ಜೀವನಕ್ಕೆ ಸಂಬಂಧಿಸಿದ ಮೌಖಿಕ ಸಂಕಲನ ಲೆಕ್ಕಗಳನ್ನು ಕೇಳುವುದು ಹಾಗೂ ಮಾಡಿಸುವುದು.<br>* ವ್ಯತ್ಯಾಸ 19ಕ್ಕೆ ಮೀರದಂತೆ ಸರಳ ಲಿಖಿತ ಮತ್ತು ನಿತ್ಯ ಜೀವನಕ್ಕೆ ಸಂಬಂಧಿಸಿದ ಮೌಖಿಕ ವ್ಯವಕಲನ ಲೆಕ್ಕಗಳನ್ನು ಕೇಳುವುದು ಹಾಗೂ ಮಾಡಿಸುವುದು.<br>* ಪುನರಾವರ್ತಿತ ಸಂಕಲನದ ಮೂಲಕ ಗುಣಾಕಾರ ಲೆಕ್ಕಗಳನ್ನು ಮಾಡಿಸುವುದು. (ಕಡ್ಡಿ/ ಕಲ್ಲು ಬಳಸಿ)<br>* ಪುನರಾವರ್ತಿತ ವ್ಯವಕಲನದ ಮೂಲಕ ಭಾಗಾಕಾರ ಲೆಕ್ಕಗಳನ್ನು ಮಾಡಿಸುವುದು. (ಕಡ್ಡಿ/ ಕಲ್ಲು ಬಳಸಿ) |
| 3 | ವಿವಿಧ ಆಕೃತಿಗಳನ್ನು ಗುರುತಿಸುವರು. ಮತ್ತು ಚಿತ್ರ ವಿನ್ಯಾಸ ಗುರುತಿಸಿ ಮುಂದಿನ ವಿನ್ಯಾಸ ಆಯ್ಕೆ ಮಾಡುವರು. | 2 | * ಹಳೆಯ ಆಮಂತ್ರಣ ಪತ್ರಿಕೆ ಅಥವಾ ರಟ್ಟುಗಳನ್ನು ಬಳಸಿ ಚೌಕ, ಆಯತ, ತ್ರಿಭುಜ ಮತ್ತು ವೃತ್ತಗಳನ್ನು ತಯಾರಿಸಲು ತಿಳಿಸಬಹುದಾಗಿದೆ. ಹಾಗೂ ಆಕೃತಿಗಳನ್ನು ಕುರಿತ ಒಗಟುಗಳನ್ನು ಮಕ್ಕಳಿಗೆ ಕೇಳಬಹುದಾಗಿದೆ.<br>* ವಿವಿಧ ಆಕೃತಿಗಳನ್ನು, ಬಣ್ಣ ಬಣ್ಣದ ಪ್ಲ್ಯಾಶ್ ಕಾರ್ಡ್‌ಗಳನ್ನು, ಎಲೆಗಳನ್ನು ಬಳಸಿ ವಿನ್ಯಾಸ ರಚಿಸುವಂತೆ ತಿಳಿಸಬಹುದಾಗಿದೆ. |

| | | | |
|---|---|---|---|
| 4 | * ವಾರದ ದಿನಗಳು ಮತ್ತು ವರ್ಷದ ತಿಂಗಳುಗಳ ಹೆಸರುಗಳನ್ನು ಗುರುತಿಸುವರು.<br>* ವಿವಿಧ ವಸ್ತು ಮತ್ತು ಸ್ಥಳಗಳನ್ನು ಅನೌಪಚಾರಿಕ ಅಳತೆ ಮಾನಗಳನ್ನು ಬಳಸಿ ಅಳತೆ ಮಾಡುವರು.<br>* ನೋಟು ಮತ್ತು ನಾಣ್ಯಗಳನ್ನು ಗುರುತಿಸುವರು.<br>* ಹಗುರ ಮತ್ತು ಭಾರವಾದ ವಸ್ತುಗಳನ್ನು ಗುರುತಿಸುವರು. | 4 | * ಮಗುವಿಗೆ ವಾರದ ದಿನಗಳಿಗನುಗುಣವಾಗಿ ತನ್ನಿಷ್ಟದ ತಿನಿಸುಗಳ ಮೆನು ಚಾರ್ಟನ್ನು ಮೌಖಿಕವಾಗಿ ಹೇಳಲು ತಿಳಿಸಬಹುದಾಗಿದೆ ಹಾಗೂ ಕ್ಯಾಲೆಂಡರ್‌ನಲ್ಲಿ ಇರುವ ವಾರದ ದಿನ ಹಾಗೂ ತಿಂಗಳುಗಳ ಹೆಸರನ್ನು ಗುರುತಿಸಲು/ಬರೆಯಲು ತಿಳಿಸಬಹುದಾಗಿದೆ.<br>* ವಿವಿಧ ವಸ್ತಗಳ ಉದ್ದ, ಅಗಲ, ಎತ್ತರಗಳನ್ನು ಅನೌಪಚಾರಿಕ ಮಾನಗಳಿಂದ ಅಳತೆ ಮಾಡಿಸಬಹುದಾಗಿದೆ. ( ಉದಾಹರಣೆಗೆ ಗೆಳೆಯರ ಎತ್ತರ, ಕಪ್ಪು ಹಲಗೆಯ ಅಗಲ, ಮೇಜಿನ ಉದ್ದ ಇತ್ಯಾದಿ)<br>* ಗಣಿತ ಕಿಟ್ ನಲ್ಲಿರುವ ಆಟಿಕೆಯ ನಾಣ್ಯ, ನೋಟುಗಳನ್ನು ನೀಡಿ ಅವುಗಳ ಮುಖಬೆಲೆ ಗುರುತಿಸಲು ತಿಳಿಸಬಹುದಾಗಿದೆ.<br>*ತರಗತಿ ಕೊಠಡಿಯಲ್ಲಿ ಲಭ್ಯವಿರುವ ಯಾವುದಾದರೂ ಎರಡು ವಸ್ತುಗಳನ್ನು ನೀಡಿ ಅವುಗಳಲ್ಲಿ ಹಗುರ ಮತ್ತು ಭಾರ ಗುರುತಿಸಲು ತಿಳಿಸಬಹುದಾಗಿದೆ. ( ಪ್ರತಿ ಮಗುವಿಗೆ ಬೇರೆ ಬೇರೆ ವಸ್ತುಗಳು ಲಭ್ಯವಾಗುವಂತೆ ನೋಡಿಕೊಳ್ಳುವುದು.) |
| 5 | ತಾವು ವೀಕ್ಷಿಸಿ ಸಂಗ್ರಹಿಸಿದ ಸರಳ ಮಾಹಿತಿಯನ್ನು ಚಿತ್ರ ಅಥವಾ ಸಂಖ್ಯೆ ಬಳಸಿ ದಾಖಲಿಸುವರು. | 1 | * ವಿವಿಧ ಸನ್ನಿವೇಶದ ವಿಷಯ / ಚಿತ್ರಗಳನ್ನು ನೀಡಿ ಮಾಹಿತಿ ಸಂಗ್ರಹಿಸುವ ಚಟುವಟಿಕೆಗಳನ್ನು ಮಾಡಿಸಬಹುದಾಗಿದೆ. **ಉದಾ :** ಸ್ನೇಹಿತರ ಹೆಸರು, ಅವರ ಹೆಸರಿನಲ್ಲಿ ಇರುವ ಅಕ್ಷರಗಳ ಸಂಖ್ಯೆ, ಶಾಲೆಯಲ್ಲಿ ಇರುವ ತರಗತಿವಾರು ಮಕ್ಕಳ ಸಂಖ್ಯೆ, ಶಾಲೆಯಲ್ಲಿಯ ವಿವಿಧ ಗಿಡ ಮರಗಳ ಸಂಖ್ಯೆ ಇತ್ಯಾದಿ. |

**ಸೂಚನೆ: * 5 ಕಲಿಕಾ ಫಲಗಳನ್ನು ನೀಡಿದ್ದು ಪ್ರತಿ ಕಲಿಕಾಫಲಗಳಿಗೂ ಸೂಚಿತ ಚಟುವಟಿಕೆಗಳನ್ನು ನೀಡಲಾಗಿದೆ. ಮಕ್ಕಳ ಸಂಖ್ಯೆಗನುಸಾರವಾಗಿ/ಸಮಯದ ಲಭ್ಯತೆಗನುಸಾರವಾಗಿ ಚಟುವಟಿಕೆಗಳನ್ನು ನಿರ್ವಹಿಸಿ ಅಂಕಗಳನ್ನು ನೀಡುವುದು. * ಪ್ರತಿ ಕಲಿಕಾ ಫಲಗಳಿಗೆ ಅಂಕಗಳನ್ನು ನಿಗದಿಪಡಿಸಿದೆ.**

## ತರಗತಿ: 02 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಗಣಿತ – ಶಿಕ್ಷಕರ ವೈಯಕ್ತಿಕ ನಮೂದು ವಹಿ

| ಕ್ರಸಂ | ಕಲಿಕಾ ಫಲಗಳು → | 1 | 2 | 3 | 4 | 5 | ಒಟ್ಟು ಅಂಕಗಳು | ಶೇಕಡಾ | ಶ್ರೇಣಿ |
|---|---|---|---|---|---|---|---|---|---|
| | ನಿಗದಿಪಡಿಸಿದ ಅಂಕಗಳು →<br>ವಿದ್ಯಾರ್ಥಿಗಳ ಹೆಸರು ↓ | 04 | 04 | 04 | 04 | 04 | | | |
| 1 | | | | | | | | | |
| 2 | | | | | | | | | |
| 3 | | | | | | | | | |
| 4 | | | | | | | | | |
| 5 | | | | | | | | | |
| 6 | | | | | | | | | |
| 7 | | | | | | | | | |
| 8 | | | | | | | | | |
| 9 | | | | | | | | | |
| 10 | | | | | | | | | |
| 11 | | | | | | | | | |
| 12 | | | | | | | | | |
| 13 | | | | | | | | | |
| 14 | | | | | | | | | |
| 15 | | | | | | | | | |

ವಿಷಯ ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

## ತರಗತಿ: 03 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಗಣಿತ

| ಕ್ರ.ಸಂ | ಕಲಿಕಾ ಫಲಗಳು | ನಿಗದಿಪಡಿಸಿದ ಅಂಕಗಳು | ಮೌಲ್ಯಾಂಕನದ ಅಂಶಗಳು/ಸೂಚನೆಗಳು |
|---|---|---|---|
| 1 | 99ರ ವರೆಗಿನ ಸಂಖ್ಯೆಗಳ ಸ್ಥಾನಬೆಲೆಯನ್ನು ಗುರುತಿಸುವರು, ಓದುವರು ಮತ್ತು ಬರೆಯುವರು. | 3 | (0 ಯಿಂದ 9ರ ವರೆಗಿನ ಅಂಕಿಗಳನ್ನು ಬಳಸಿಕೊಂಡು ಸ್ಪಷ್ಟ ಸೂಚನೆಗಳೊಂದಿಗೆ ಎರಡಂಕಿಯ ಸಂಖ್ಯೆಗಳನ್ನು ರಚಿಸಲು ಹೇಳಬಹುದಾಗಿದೆ.)<br>• ರಚಿಸಿಕೊಂಡ ಸಂಖ್ಯೆಗಳ ಸ್ಥಾನ ಹಾಗೂ ಸ್ಥಾನಬೆಲೆಯನ್ನು ಬರೆಯಲು ಹೇಳಬಹುದಾಗಿದೆ.<br>• ರಚಿಸಿಕೊಂಡ ಸಂಖ್ಯೆಗಳನ್ನು ಓದಲು ಹೇಳಬಹುದಾಗಿದೆ.<br>• ರಚಿಸಿಕೊಂಡ ಸಂಖ್ಯೆಗಳನ್ನು ಪದಗಳಲ್ಲಿ ಬರೆಯಲು ಹೇಳಬಹುದಾಗಿದೆ. |
| 2 | ಎರಡಂಕಿ ಸಂಖ್ಯೆಗಳಲ್ಲಿ ಅತಿ ದೊಡ್ಡ ಮತ್ತು ಅತಿ ಚಿಕ್ಕ ಸಂಖ್ಯೆಗಳನ್ನು ಹೋಲಿಸುವರು ಮತ್ತು ರಚಿಸುವರು. | 4 | • 0 ಯಿಂದ 9ರ ವರೆಗಿನ ಅಂಕಿಗಳನ್ನು ಬಳಸಿಕೊಂಡು ಎರಡಂಕಿಯ ಎರಡು ಸಂಖ್ಯೆಗಳನ್ನು ರಚಿಸಿ ಬರೆಯಲು ಹೇಳಬಹುದಾಗಿದೆ.<br>• ರಚಿಸಿಕೊಂಡ/ ಬರೆದ ಸಂಖ್ಯೆಗಳಲ್ಲಿ ಅತಿ ದೊಡ್ಡ (ಗರಿಷ್ಠ) ಸಂಖ್ಯೆ ಬರೆಯಲು ಹೇಳಬಹುದಾಗಿದೆ.<br>• ರಚಿಸಿಕೊಂಡ/ ಬರೆದ ಸಂಖ್ಯೆಗಳಲ್ಲಿ ಅತಿ ದೊಡ್ಡ (ಕನಿಷ್ಠ) ಸಂಖ್ಯೆ ಬರೆಯಲು ಹೇಳಬಹುದಾಗಿದೆ.<br>• ರಚಿಸಿಕೊಂಡ/ ಬರೆದ ಎರಡು ಸಂಖ್ಯೆಗಳ ನಡುವೆ (<,>,=) ಸೂಕ್ತ ಚಿಹ್ನೆ ಹಾಕಲು ಹೇಳಬಹುದಾಗಿದೆ. |
| 3 | ಕೊಟ್ಟಿರುವ ಸಂಖ್ಯೆಗಳನ್ನು ಏರಿಕೆ ಮತ್ತು ಇಳಿಕೆ ಕ್ರಮದಲ್ಲಿ ಹೋಲಿಸುವರು. | 2 | • ನೀಡಿದ ಎರಡಂಕಿ ಸಂಖ್ಯೆಗಳನ್ನು ಏರಿಕೆ ಕ್ರಮದಲ್ಲಿ ಬರೆಯಲು ಹೇಳಬಹುದಾಗಿದೆ. (ಕನಿಷ್ಠ 4 ಸಂಖ್ಯೆ)<br>• ನೀಡಿದ ಎರಡಂಕಿ ಸಂಖ್ಯೆಗಳನ್ನು ಇಳಿಕೆ ಕ್ರಮದಲ್ಲಿ ಬರೆಯಲು ಹೇಳಬಹುದಾಗಿದೆ. (ಕನಿಷ್ಠ 4 ಸಂಖ್ಯೆ) |

| | | | |
|---|---|---|---|
| 4 | ಸ್ಥಾನಬೆಲೆ ಕೋಷ್ಟಕದಲ್ಲಿ ಸ್ಥಾನಬೆಲೆಗೆ ಅನುಗುಣವಾಗಿ ಸಂಖ್ಯೆಗಳನ್ನು ಬರೆದುಕೊಂಡು ಸಂಕಲನ ಹಾಗೂ ವ್ಯವಕಲನ ಮಾಡುವರು ಮತ್ತು ನಿತ್ಯಜೀವನದ ಸರಳ ಸಮಸ್ಯೆಗಳಿಗೆ/ ಸನ್ನಿವೇಶಗಳಿಗೆ ಅನ್ವಯಿಸಿಕೊಂಡು ಪರಿಹಾರ ನೀಡುವರು. | 4 | (ದಶಕರಹಿತ ಮತ್ತು ದಶಕಸಹಿತ ಸಂಕಲನ (ಉದಾ: 42+26 ಮತ್ತು 35+19) ಲೆಕ್ಕಗಳನ್ನು ಅಡ್ಡಸಾಲಿನಲ್ಲಿ ನೀಡುವುದು.)<br>• ಸ್ಥಾನಕ್ಕೆ ಅನುಗುಣವಾಗಿ ಅಂಕಿಗಳನ್ನು ಕಂಬಸಾಲಿನಲ್ಲಿ ಬರೆದುಕೊಂಡು ಸಂಕಲನ ಮಾಡಲು ಹೇಳಬಹುದಾಗಿದೆ.<br>(ದಶಕರಹಿತ ಮತ್ತು ದಶಕಸಹಿತ ವ್ಯವಕಲನ (ಉದಾ: 38–26 ಮತ್ತು 45–19) ಲೆಕ್ಕಗಳನ್ನು ಅಡ್ಡಸಾಲಿನಲ್ಲಿ ನೀಡುವುದು.)<br>• ಸ್ಥಾನಕ್ಕೆ ಅನುಗುಣವಾಗಿ ಅಂಕಿಗಳನ್ನು ಕಂಬಸಾಲಿನಲ್ಲಿ ಬರೆದುಕೊಂಡು ವ್ಯವಕಲನ ಮಾಡಲು ಹೇಳಬಹುದಾಗಿದೆ.<br>• ಹಣ/ತೂಕ/ಗಾತ್ರಕ್ಕೆ ಸಂಬಂಧಿಸಿದಂತೆ ಹೇಳಿಕೆ ರೂಪದ ನಿತ್ಯಜೀವನದ ಸಂಕಲನದ ಲೆಕ್ಕಗಳನ್ನು ಮಾಡಲು ಹೇಳಬಹುದಾಗಿದೆ.<br>• ಹಣ/ತೂಕ/ಗಾತ್ರಕ್ಕೆ ಸಂಬಂಧಿಸಿದಂತೆ ಹೇಳಿಕೆ ರೂಪದ ನಿತ್ಯಜೀವನದ ವ್ಯವಕಲನ ಲೆಕ್ಕಗಳನ್ನು ಮಾಡಲು ಹೇಳಬಹುದಾಗಿದೆ. |
| 5 | ಪುನರಾವರ್ತಿತ ಸಂಕಲನವನ್ನು ಬಳಸಿ 99ರ ವರೆಗಿನ ಗುಣಾಕಾರದ ಸಮಸ್ಯೆಗಳನ್ನು ಹಾಗೂ ಪುನರಾವರ್ತಿತ ವ್ಯವಕಲನವನ್ನು ಬಳಸಿ ಭಾಗಾಕಾರದ ಸಮಸ್ಯೆಗಳನ್ನು ಬಿಡಿಸುವರು. | 2 | • ವಸ್ತು/ಸಂಖ್ಯೆಗಳನ್ನು ಬಳಸಿಕೊಂಡು ಪುನರಾವರ್ತಿತ ಸಂಕಲನದ ಮೂಲಕ ಗುಣಾಕಾರದ ಲೆಕ್ಕಗಳನ್ನು ಮಾಡಲು ನೀಡಬಹುದಾಗಿದೆ.<br>• ವಸ್ತು/ನೋಟು/ನಾಣ್ಯಗಳನ್ನು ಬಳಸಿಕೊಂಡು ಪುನರಾವರ್ತಿತ ವ್ಯವಕಲನದ ಮೂಲಕ ಭಾಗಾಕಾರ ಲೆಕ್ಕಗಳನ್ನು ಮಾಡಲು ನೀಡಬಹುದಾಗಿದೆ. |

**ಸೂಚನೆ:** * 5 ಕಲಿಕಾ ಫಲಗಳನ್ನು ನೀಡಿದ್ದು ಪ್ರತಿ ಕಲಿಕಾಫಲಗಳಿಗೂ ಸೂಚಿತ ಚಟುವಟಿಕೆಗಳನ್ನು ನೀಡಲಾಗಿದೆ. ಮಕ್ಕಳ ಸಂಖ್ಯೆಗನುಸಾರವಾಗಿ/ಸಮಯದ ಲಭ್ಯತೆಗನುಸಾರವಾಗಿ ಚಟುವಟಿಕೆಗಳನ್ನು ನಿರ್ವಹಿಸಿ ಅಂಕಗಳನ್ನು ನೀಡುವುದು.

* ಪ್ರತಿ ಕಲಿಕಾ ಫಲಗಳಿಗೆ ಅಂಕಗಳನ್ನು ನಿಗದಿಪಡಿಸಿದೆ.

## ತರಗತಿ: 03 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಗಣಿತ – ಶಿಕ್ಷಕರ ವೈಯಕ್ತಿಕ ನಮೂದು ವಹಿ

| ಕ್ರ. ಸಂ | ಕಲಿಕಾ ಫಲಗಳು → | 1 | 2 | 3 | 4 | 5 | ಒಟ್ಟು ಅಂಕಗಳು | ಶೇಕಡಾ | ಶ್ರೇಣಿ |
|---|---|---|---|---|---|---|---|---|---|
| | ನಿಗದಿಪಡಿಸಿದ ಅಂಕಗಳು → ವಿದ್ಯಾರ್ಥಿಗಳ ಹೆಸರು ↓ | 03 | 03 | 03 | 03 | 03 | | | |
| 1 | | | | | | | | | |
| 2 | | | | | | | | | |
| 3 | | | | | | | | | |
| 4 | | | | | | | | | |
| 5 | | | | | | | | | |
| 6 | | | | | | | | | |
| 7 | | | | | | | | | |
| 8 | | | | | | | | | |
| 9 | | | | | | | | | |
| 10 | | | | | | | | | |
| 11 | | | | | | | | | |
| 12 | | | | | | | | | |
| 13 | | | | | | | | | |
| 14 | | | | | | | | | |
| 15 | | | | | | | | | |

ವಿಷಯ ಶಿಕ್ಷಕರ ಸಹಿ ಮುಖ್ಯ ಶಿಕ್ಷಕರ ಸಹಿ

## ತರಗತಿ: 02 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಆರೋಗ್ಯ ಮತ್ತು ಪರಿಸರ

| ಕ್ರ. ಸಂ. | ಕಲಿಕಾ ಫಲಗಳು | ನಿಗದಿಪಡಿಸಿದ ಅಂಕಗಳು | ಮೌಲ್ಯಾಂಕನಕ್ಕೆ ಸೂಚನೆಗಳು |
|---|---|---|---|
| 1. | ಕುಟುಂಬದ ಕುರಿತಾಗಿ ಮಾತನಾಡುವರು. ಕುಟುಂಬದ ವ್ಯಕ್ತಿಗಳ ನಡುವಿನ ಸಂಬಂಧವನ್ನು ಗುರುತಿಸುವರು. | 3 | • ತನ್ನ ಕುಟುಂಬದಲ್ಲಿರುವ ಸದಸ್ಯರನ್ನು ಹೆಸರಿಸಲು ಹೇಳಬಹುದಾಗಿದೆ<br>• ಮನೆಯ ಚಿತ್ರ ಬಿಡಿಸಲು ಹೇಳಿ ಅದರಲ್ಲಿ ತನ್ನ ಮನೆಯಲ್ಲಿರುವ ಸದಸ್ಯರ ಚಿತ್ರ (ಮಗುವಿಗೆ ತೋಚಿದ ರೀತಿಯಲ್ಲಿ) ಬಿಡಿಸಲು ಹಾಗೂ ಅದರ ಕುರಿತು ಮಾತನಾಡಲು ಅವಕಾಶ ಕಲ್ಪಿಸಬಹುದಾಗಿದೆ.<br>• ಪ್ರತಿ ಮಗುವಿಗೆ ಒಂದು ಬಿಳಿ ಹಾಳೆ ಕೊಟ್ಟು ಮನೆಯಲ್ಲಿರುವ ತನ್ನ ಸದಸ್ಯರ ಬಲ ಹಸ್ತದ ಅಚ್ಚು ತೆಗೆದುಕೊಂಡು ಬಂದು ತರಗತಿಯಲ್ಲಿ ಅವು ಯಾರು ಯಾರದ್ದೆಂದು ಹೇಳಲು ತಿಳಿಸಬಹುದಾಗಿದೆ. |
| 2. | ದೇಹದ ವಿವಿಧ ಭಾಗಗಳನ್ನು ಗುರುತಿಸುವರು ಮತ್ತು ಅವುಗಳ ಕಾರ್ಯಗಳನ್ನು ವಿವರಿಸುವರು. | 3 | • ಈರುಳ್ಳಿ ಸಿಪ್ಪೆ ಬಿಡಿಸುವ ಆಟದ ಮೂಲಕ ತನಗೆ ಬಂದ ಅಂಗಗಳ ಹೆಸರು ಹಾಗೂ ಅವುಗಳ ಕಾರ್ಯಗಳ ಬಗ್ಗೆ ಹೇಳಿಸಬಹುದಾಗಿದೆ. ಪಾತ್ರಾಭಿನಯದ ಮೂಲಕವೂ ಆಯಾ ಅಂಗಗಳ ಕಾರ್ಯಗಳನ್ನು ಹೇಳಿಸಬಹುದಾಗಿದೆ.<br>• ಇ.ಎನ್.ಕೆ. ನಲ್ಲಿ ಬಳಸುತ್ತಿರುವ ಸೈಮನ್ ಸೇಯ್ಸ್ ಆಟದ ರೀತಿಯಲ್ಲಿ ಮಕ್ಕಳಿಂದ ಅಂಗಗಳನ್ನು ಗುರುತಿಸುವ ಹಾಗೂ ಅವುಗಳ ಕಾರ್ಯಗಳನ್ನು ಹೇಳಿಸುವ ಚಟುವಟಿಕೆ ಮಾಡಿಸಬಹುದಾಗಿದೆ.<br>• ಮಕ್ಕಳಿಗೆ ವೃತ್ತಾಕಾರದಲ್ಲಿ ನಿಲ್ಲಿಸಿ ಕೆಲವರಿಗೆ ಅಂಗಗಳ ಹಾಗೂ ಇನ್ನು ಕೆಲವರಿಗೆ ಅವುಗಳ ಕಾರ್ಯಗಳ ಚಿತ್ರ ಮಿಂಚುಪಟ್ಟಿಗಳನ್ನು ಕೊಟ್ಟು ಇ.ಎನ್.ಕೆ. ಯಲ್ಲಿನ ಫೈರ್ ಆನ್ ದ ಮೌಂಟೈನ್ ಮಾದರಿಯಲ್ಲಿ ಆಟ ಆಡಿಸಬಹುದಾಗಿದೆ.<br>• ಮನುಷ್ಯನ ಚಿತ್ರ ಬಿಡಿಸಲು ಹೇಳಿ, ಅದರ ಭಾಗಗಳನ್ನು ಮೌಖಿಕವಾಗಿ ಹೇಳಿಸಬಹುದಾಗಿದೆ. |
| 3. | ವಿವಿಧ ವೃತ್ತಿಗಳನ್ನು ಗುರುತಿಸುವರು ಹಾಗು ಅವುಗಳ ಮಹತ್ವವನ್ನು ತಿಳಿಯುವರು ಹಾಗು ಸಮಾಜಕ್ಕೆ ಕೊಡುಗೆ ನೀಡುವ ದೃಷ್ಟಿಯಿಂದ ತಮ್ಮ ಸಾಮರ್ಥ್ಯ ಹಾಗು ಆಸಕ್ತಿಯನ್ನು ವ್ಯಕ್ತ ಪಡಿಸುವರು. | 3 | • ವಿವಿಧ ವೃತ್ತಿಗಳ ಮಿಂಚುಪಟ್ಟಿಗಳನ್ನು ಬಳಸಿ, ಅಶು ಭಾಷಣ, ಪಾತ್ರಾಭಿನಯದ ಮೂಲಕ ಆಯಾ ವೃತ್ತಿನಿರತರ ಕಾರ್ಯ ಮತ್ತು ಮಹತ್ವಗಳನ್ನು ಹೇಳಿಸಬಹುದಾಗಿದೆ.<br>• ಪಾಸಿಂಗ್ ದ ಬಾಲ್ ಆಟದ ಮೂಲಕ ತಾನು ದೊಡ್ಡವನಾದ ಮೇಲೆ ಏನಾಗಬಯಸುವೆ ಎಂಬ ಬಗ್ಗೆ ತನ್ನದೇ ಮಾತುಗಳಲ್ಲಿ ಹೇಳಲು ಪ್ರೋತ್ಸಾಹಿಸಬಹುದಾಗಿದೆ.<br>• ಸಮೀಕ್ಷೆಯ ಮೂಲಕ ತನ್ನ ಸುತ್ತಲಿನ ವೃತ್ತಿಗಳನ್ನು ಪಟ್ಟಿ ಮಾಡಿಸಿ, ಅವುಗಳ ಪ್ರಾಮುಖ್ಯತೆಯ ಬಗ್ಗೆ ಚರ್ಚೆ ಮಾಡಿಸಬಹುದಾಗಿದೆ. |
| 4. | ತಾವು ಸೇವಿಸುವ ಆಹಾರಗಳನ್ನು ಪಟ್ಟಿ ಮಾಡುವರು ಹಾಗೂ ತನ್ನ ಆಯ್ಕೆಯ (ಇಷ್ಟದ) ಆಹಾರ ವಸ್ತುಗಳ ಬಗ್ಗೆ ಮಾತನಾಡುವರು. | 3 | • ಗುಂಪುಗಳಲ್ಲಿ ಯೋಜನಾ ಕಾರ್ಯವನ್ನು, ಮೌಖಿಕ ಪ್ರಶ್ನಾವಳಿಗಳನ್ನು ಬಳಸಿ, ಚರ್ಚೆ ಮಾಡಬಹುದಾಗಿದೆ.<br>• ಮೀನು –ಗಾಳ ಚಟುವಟಿಕೆಯ ಮೂಲಕ ತನ್ನ ಇಷ್ಟದ ತರಕಾರಿ/ಹಣ್ಣುಗಳನ್ನು ಆರಿಸಿ ಅದರ ಬಗ್ಗೆ ಅಭಿಪ್ರಾಯ ಹೇಳಿಸಬಹುದಾಗಿದೆ.<br>• ಪ್ರತಿ ಮಗು ಮನೆಯಿಂದ ಯಾವುದಾದರೊಂದೊಂದು ತರಕಾರಿ/ಹಣ್ಣು ತಂದು, ಅದರ ಹೆಸರು ಹೇಳುವುದರ ಜೊತೆಗೆ ಅದರಿಂದ ತಯಾರಿಸಿದ, ತಾನು ತಿಂದಿರುವ ತನ್ನ ಇಷ್ಟದ ಆಹಾರ ಪದಾರ್ಥಗಳ ಬಗ್ಗೆ ಹೇಳಿಸಬಹುದಾಗಿದೆ. |
| 5. | ತಮ್ಮ ದಿನನಿತ್ಯದ ಕಾರ್ಯಗಳನ್ನು (ದಿನಚರಿ) ವಿವರಿಸುವರು. | 3 | • ಮಗು ತಾನು ದಿನನಿತ್ಯ ಮಾಡುವ ಕೆಲಸಗಳನ್ನು ಪಟ್ಟಿ ಮಾಡಿಸಬಹುದಾಗಿದೆ.<br>• ತಪಶೀಲು ಪಟ್ಟಿಗಳನ್ನು ಬಳಸಿ ಅವಲೋಕನಾ ತಂತ್ರದ ಮೂಲಕ ಮೌಲ್ಯಾಂಕನ ಮಾಡಬಹುದಾಗಿದೆ<br>• ವಿವಿಧ ಕೆಲಸಗಳನ್ನು ಅಭಿನಯಿಸಿ ತೋರಿಸಲು ಹಾಗೂ ಬೇರೆಯವರು ಮಾಡಿದ ಅಭಿನಯಗಳನ್ನು ಗುರುತಿಸಲು ಅವಕಾಶ ನೀಡಬಹುದಾಗಿದೆ. |
| ಒಟ್ಟು | | 15 | |

**ತರಗತಿ: 02 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಆರೋಗ್ಯ ಮತ್ತು ಪರಿಸರ – ಶಿಕ್ಷಕರ ವೈಯಕ್ತಿಕ ನಮೂದು ವಹಿ**

| ಕ್ರ.ಸಂ | ಕಲಿಕಾ ಫಲಗಳು → | 1 | 2 | 3 | 4 | 5 | ಒಟ್ಟು ಅಂಕಗಳು | ಶೇಕಡಾ | ಗ್ರೇಡ್ |
|---|---|---|---|---|---|---|---|---|---|
| | ನಿಗದಿಪಡಿಸಿದ ಅಂಕಗಳು → ↓ ವಿದ್ಯಾರ್ಥಿಗಳ ಹೆಸರು | 03 | 03 | 03 | 03 | 03 | | | |
| 01 | | | | | | | | | |
| 02 | | | | | | | | | |
| 03 | | | | | | | | | |
| 04 | | | | | | | | | |
| 05 | | | | | | | | | |
| 06 | | | | | | | | | |
| 07 | | | | | | | | | |
| 08 | | | | | | | | | |
| 09 | | | | | | | | | |
| 10 | | | | | | | | | |
| 11 | | | | | | | | | |
| 12 | | | | | | | | | |
| 13 | | | | | | | | | |
| 14 | | | | | | | | | |
| 15 | | | | | | | | | |

ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ

## ತರಗತಿ: 03 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಪರಿಸರ ಅಧ್ಯಯನ

| ಕ್ರ. ಸಂ. | ಕಲಿಕಾ ಫಲಗಳು | ನಿಗದಿಪಡಿಸಿದ ಅಂಕಗಳು | ಮೌಲ್ಯಾಂಕನಕ್ಕೆ ಸೂಚನೆಗಳು |
|---|---|---|---|
| 1. | ಕುಟುಂಬದ ಸದಸ್ಯರ ಪಾತ್ರಗಳು ಮತ್ತು ಪ್ರಾಮುಖ್ಯತೆಯನ್ನು ವಿವರಿಸುವರು. | 03 | • ಕುಟುಂಬ ನಕ್ಷೆಯನ್ನು ಬಿಡಿಸುವ ಮೂಲಕವಾಗಲಿ ಕುಟುಂಬದ ಸದಸ್ಯರಿರುವ ಭಾವಚಿತ್ರವನ್ನು ಪ್ರದರ್ಶಿಸುತ್ತಾ ಅಥವಾ ತಮ್ಮ ಕುಟುಂಬದ ಸದಸ್ಯರ ಬಗ್ಗೆ ಮೌಖಿಕವಾಗಿ ಅವರ ಕಾರ್ಯಗಳನ್ನು ಹೇಳುತ್ತಾ ಕುಟುಂಬದ ಸದಸ್ಯರನ್ನು ಪರಿಚಯಿಸಿಕೊಳ್ಳಬಹುದಾಗಿದೆ.<br>• ತಮ್ಮ ಸ್ನೇಹಿತರ ಸಹಾಯದಿಂದ ಕುಟುಂಬದ ಸದಸ್ಯರು ನಿರ್ವಹಿಸುವ ಪಾತ್ರಗಳನ್ನು ಅಭಿನಯಿಸಲು ತಿಳಿಸಬಹುದಾಗಿದೆ.<br>• ತನ್ನ ಕುಟುಂಬದಲ್ಲಿ ಈಗಿರುವ ಸದಸ್ಯರ ಹೆಸರುಗಳನ್ನು ಹಂಚಿಕೊಳ್ಳಲು ತಿಳಿಸಬಹುದಾಗಿದೆ.<br>• ತನ್ನ ಕುಟುಂಬದ ಸದಸ್ಯರು ನಿರ್ವಹಿಸುವ ಕೆಲಸಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸುತ್ತಾ ಅವರಿಗೆ 'ಧನ್ಯವಾದ ಕಾರ್ಡ' ತಯಾರಿಸಲು ತಿಳಿಸಬಹುದಾಗಿದೆ.<br>• ತನ್ನ ಮನೆಯ ಸದಸ್ಯರಿಗೆ ನೆರವಾಗುವಂತೆ ತಾನು ಮಾಡಿದ ಕೆಲಸಗಳನ್ನು ಸ್ನೇಹಿತರೊಂದಿಗೆ ಹಂಚಿಕೊಳ್ಳಲು ತಿಳಿಸಬಹುದಾಗಿದೆ. |
| 2. | ಆಹಾರದ ವಿವಿಧ ಮೂಲಗಳನ್ನು ಮತ್ತು ಅಡುಗೆ ಮನೆಯಲ್ಲಿ ಆಹಾರ ತಯಾರಿಸಲು ಬಳಸುವ ಪರಿಕರಗಳನ್ನು ಪಟ್ಟಿಮಾಡುವರು. | 03 | • ತನ್ನ ಮನೆಯಿಂದ ತಂದ/ಚಿತ್ರ ಮಾದರಿಯ ಒಂದು ಹಣ್ಣು/ತರಕಾರಿಯ ಬಗ್ಗೆ ಮಾತನಾಡಿಸಬಹುದಾಗಿದೆ.<br>• ತಾನು ತಿಂದಿರುವ/ತಿಳಿದಿರುವ ತರಕಾರಿ/ಹಣ್ಣುಗಳ ಚಿತ್ರ ಬಿಡಿಸಿ ಬಣ್ಣ ತುಂಬಲು ತಿಳಿಸಬಹುದಾಗಿದೆ.<br>• ತಾನು ಸೇವಿಸಿದ ಎರಡು ಆಹಾರ ಪದಾರ್ಥಗಳು, ಅವುಗಳ ಮೂಲ ಯಾವುದೆಂದು ಗುರುತಿಸಲು ತಿಳಿಸಿ ತನಗೆ ಆಹಾರ ಒದಗಿಸಿದ ಸಸ್ಯ ಹಾಗೂ ಪ್ರಾಣಿಗಳಿಗೆ ಕೃತಜ್ಞತಾ ಭಾವನೆಯನ್ನು ಹಂಚಿಕೊಳ್ಳಲು ಹೇಳಬಹುದಾಗಿದೆ.<br>• ತಮ್ಮ ಮನೆಯಲ್ಲಿ ಬಳಸುವ ಒಂದು ಅಡುಗೆ ಪಾತ್ರೆಯ ಚಿತ್ರ ಬಿಡಿಸಿ ಅದರ ಉಪಯೋಗ ಹೇಳಲು ತಿಳಿಸಬಹುದಾಗಿದೆ.<br>• ಒಂದು ನಿರ್ದಿಷ್ಟ ಆಹಾರ ಪದಾರ್ಥ ತಯಾರಿಸಲು ಬೇಕಾದ ಪಾತ್ರೆ-ಪರಿಕರಗಳ ಪಟ್ಟಿ ಮಾಡಲು ತಿಳಿಸಬಹುದಾಗಿದೆ. |
| 3. | ಸಸ್ಯದ ಭಾಗಗಳನ್ನು ಗುರುತಿಸಿ, ನಿತ್ಯ ಜೀವನದಲ್ಲಿ ಅವುಗಳ ಉಪಯೋಗಗಳನ್ನು ತಿಳಿಸುವರು. | 03 | • ಸಸ್ಯದ ಚಿತ್ರ ತೆಗೆದು ಅದರ ಭಾಗಗಳನ್ನು ಗುರುತಿಸಲು ತಿಳಿಸಬಹುದಾಗಿದೆ.<br>• ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಂಗಡಿಸಿ ಪ್ರತಿ ಗುಂಪಿಗೆ ಸಸ್ಯದ ಒಂದೊಂದು ಭಾಗ ಉದಾ: ಗಜ್ಜರಿ (ಬೇರು) ಪಾಲಕದ ಸೊಪ್ಪು (ಎಲೆ ಮತ್ತು ಕಾಂಡ), ಕರಿಬೇವು (ಎಲೆ) ಕೊಟ್ಟು ಅದು ಸಸ್ಯದ ಯಾವ ಭಾಗದಿಂದ ಬಂದಿದೆ, ಅದರ ಉಪಯೋಗವೇನು? ಎಂಬುದನ್ನು ಚರ್ಚಿಸಲು ತಿಳಿಸಿ ಚರ್ಚೆಯಲ್ಲಿ ಕೈಗೊಂಡ ತೀರ್ಮಾನಗಳನ್ನು ಹೇಳಲು ತಿಳಿಸಬಹುದಾಗಿದೆ.<br>• ಮನೆಯಲ್ಲಿ ಉಪಯೋಗಿಸುವ ತರಕಾರಿಗಳು ಸಸ್ಯದ ಯಾವ ಭಾಗದಿಂದ ಬಂದಿವೆ ಎಂಬುದರ ಬಗ್ಗೆ ಸಮೀಕ್ಷೆ ತಿಳಿಸಬಹುದಾಗಿದೆ.<br>• ಸಸ್ಯಗಳನ್ನು ಪೋಷಿಸಿ ಬೆಳೆಸಿ ಕೈತೋಟ ನಿರ್ಮಿಸಲು ತಿಳಿಸಬಹುದಾಗಿದೆ. |

| | | | |
|---|---|---|---|
| 4. | **ಒಳಾಂಗಣ ಮತ್ತು ಹೊರಾಂಗಣ ಆಟಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸುವರು.** | 03 | • ತಾನು ಆಡಿರುವ ಆಟಗಳನ್ನು ಒಳಾಂಗಣ ಮತ್ತು ಹೊರಾಂಗಣವೆಂದು ವಿಂಗಡಿಸಲು ತಿಳಿಸಬಹುದಾಗಿದೆ.<br>• ಶಾಲೆಯಲ್ಲಿನ ಆಟದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ತಿಳಿಸಬಹುದಾಗಿದೆ.<br>• ಆಟಿಕೆ ಸಾಮಗ್ರಿಗಳನ್ನು ಆಧರಿಸಿ ಆಟದ ಹೆಸರು ಹೇಳುತ್ತಾ ಅದು ಒಳಾಂಗಣವೇ, ಹೊರಾಂಗಣವೇ ಎಂದು ಕಾರಣ ಸಹಿತ ವಿವರಿಸಲು ತಿಳಿಸಬಹುದಾಗಿದೆ.<br>• ತನಗೆ ಬೇಕಾದ ಆಟಿಕೆಯನ್ನು ತಯಾರಿಸಿ ತನ್ನ ಸ್ನೇಹಿತರೊಂದಿಗೆ ಆಡಲು ತಿಳಿಸಬಹುದಾಗಿದೆ.<br>• ತನಗೆ ಇಷ್ಟವಾದ ಆಟಗಳು, ಅವುಗಳನ್ನು ಇಷ್ಟ ಪಡಲು ಕಾರಣಗಳನ್ನು ವಿವರಿಸಲು ತಿಳಿಸಬಹುದಾಗಿದೆ. |
| 5. | **ತನ್ನ ಕುಟುಂಬದ ಮತ್ತು ನೆರೆಹೊರೆ ಕುಟುಂಬದ ಸದಸ್ಯರು ಮತ್ತು ಸ್ನೇಹಿತರೊಂದಿಗೆ ಹಾಗೂ ಸಾಕು ಪ್ರಾಣಿಗಳೊಂದಿಗೆ ಕಾಳಜಿ ಮತ್ತು ಗೌರವವನ್ನು ವ್ಯಕ್ತಪಡಿಸುವರು.** | 03 | • ತನ್ನ ಕುಟುಂಬದ ಸದಸ್ಯರಿಗೆ ಸಹಾಯ ಮಾಡಿ ಅವರಿಂದ ಮೆಚ್ಚುಗೆ ಪಡೆದ ಘಟನೆಯನ್ನು ವಿವರಿಸಲು ತಿಳಿಸಬಹುದಾಗಿದೆ.<br>• ತನ್ನ ಸ್ನೇಹಿತರಿಗೆ ತಾನು ಮಾಡಿದ ಸಹಾಯದ ಘಟನೆಯನ್ನು ವಿವರಿಸಲು ತಿಳಿಸಬಹುದಾಗಿದೆ. (ಉದಾ: ಆಟ ಆಡುವಾಗ ಸ್ನೇಹಿತನೊಬ್ಬನು ಬಿದ್ದಾಗ ಉಪಚರಿಸುವ ಕ್ರಮ)<br>• ತನ್ನ ನೆರೆಹೊರೆಯವರೊಂದಿಗೆ ಸಹಾಯ ಮಾಡಿ ಅವರಿಂದ ಮೆಚ್ಚುಗೆ ಪಡೆದ ಘಟನೆಯನ್ನು ವಿವರಿಸಲು ತಿಳಿಸಬಹುದಾಗಿದೆ.<br>• ಪಕ್ಷಿಗಳಿಗೆ ಆಹಾರದಾನಿ ತಯಾರಿಸಿ, ಅದನ್ನು ತರಗತಿಯಲ್ಲಿ ಪ್ರದರ್ಶಿಸಿ ಮನೆಯ ಸುತ್ತಲಿನ ಗಿಡ ಮರಕ್ಕೆ ತೂಗು ಹಾಕುವುದರ ಮೂಲಕ ಅವುಗಳಿಗೆ ಆಹಾರ ಒದಗಿಸಲು ತಿಳಿಸಬಹುದಾಗಿದೆ.<br>• ಸಾಕು ಪ್ರಾಣಿಗಳೊಂದಿಗೆ ತಮ್ಮ ಒಡನಾಟವನ್ನು, ಅವು ತಮಗೆ ತೋರಿಸುವ ಪ್ರೀತಿಯನ್ನು ಹಾಗೂ ಅವುಗಳಿಗೆ ತಾವು ತೋರಿಸುವ ಕಾಳಜಿಯನ್ನು ಚಿತ್ರದ ಮೂಲಕ ಅಥವಾ ತಮ್ಮ ಮಾತುಗಳಲ್ಲಿ ವ್ಯಕ್ತಪಡಿಸಲು ತಿಳಿಸಬಹುದಾಗಿದೆ. |
| **ಒಟ್ಟು** | | **15** | |

## ತರಗತಿ: 03 – ರೂಪಣಾತ್ಮಕ ಮೌಲ್ಯಾಂಕನ (FA) –1 – ವಿಷಯ: ಪರಿಸರ ಅಧ್ಯಯನ – ಶಿಕ್ಷಕರ ವೈಯಕ್ತಿಕ ನಮೂದು ವಹಿ

| ಕ್ರ.ಸಂ | ಕಲಿಕಾ ಫಲಗಳು → | 1 | 2 | 3 | 4 | 5 | ಒಟ್ಟು ಪಡೆದ ಅಂಕಗಳು | ಶೇಕಡಾ | ಗ್ರೇಡ್ |
|---|---|---|---|---|---|---|---|---|---|
| | ನಿಗದಿಪಡಿಸಿದ ಅಂಕಗಳು → ↓ ವಿದ್ಯಾರ್ಥಿಗಳ ಹೆಸರು | 03 | 03 | 03 | 03 | 03 | | | |
| 01 | | | | | | | | | |
| 02 | | | | | | | | | |
| 03 | | | | | | | | | |
| 04 | | | | | | | | | |
| 05 | | | | | | | | | |
| 06 | | | | | | | | | |
| 07 | | | | | | | | | |
| 08 | | | | | | | | | |
| 09 | | | | | | | | | |
| 10 | | | | | | | | | |
| 11 | | | | | | | | | |
| 12 | | | | | | | | | |
| 13 | | | | | | | | | |
| 14 | | | | | | | | | |
| 15 | | | | | | | | | |

ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ